ಸೈಕಲ್‌ಗಳ ಮೇಲೆ ಮಹಿಳೆಯರು

ಅರವಿಂದ ಗುಪ್ತ
ಕನ್ನಡಕ್ಕೆ : ವಿ. ಎಸ್. ಎಸ್. ಶಾಸ್ತ್ರಿ
ಚಿತ್ರಗಳು : ಇಷಿತಾ ಧರಪ್

ಜಯಕರ್ನಾಟಕ ಪ್ರಕಾಶನ

ನವಕರ್ನಾಟಕ ಪ್ರಕಾಶನದ ೪೯೩೧ನೇ ಪ್ರಕಟಣೆ

ಅರವಿಂದ ಗುಪ್ತ

ಸೈಕಲ್‌ಗಳ ಮೇಲೆ ಮಹಿಳೆಯರು

ಕನ್ನಡಕ್ಕೆ
ವಿ. ಎಸ್. ಎಸ್. ಶಾಸ್ತ್ರಿ

ಚಿತ್ರಗಳು
ಇಷಿತಾ ಧರಪ್

ನವಕರ್ನಾಟಕ ಪ್ರಕಾಶನ

CYCLEGALA MELE MAHILEYARU(Kannada)
WOMEN ON WHEELS by Arvind Gupta
Translated by V. S. S. Sastry

First Edition : 2017 Pages : 40 Price : ₹ 60
Paper : 90 gsm NS Maplitho 24 Kgs (¼ Demy Size)

ಮೊದಲ ಮುದ್ರಣ : 2017

ಪ್ರತಿಗಳ ಸಂಖ್ಯೆ : 1000

ಕನ್ನಡ ಕೃತಿಸ್ವಾಮ್ಯ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಪಠ್ಯದ ಹಕ್ಕುಗಳು : ಅರವಿಂದ ಗುಪ್ತ
ಚಿತ್ರಗಳ ಹಕ್ಕುಗಳು : ಇಷಿತಾ ಧರಪ್

ಬೆಲೆ : ₹ 60

ಮುಖಚಿತ್ರ ಮತ್ತು ಒಳಚಿತ್ರಗಳು : ಇಷಿತಾ ಧರಪ್

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ , ಬೆಂಗಳೂರು - 560 001
ದೂರವಾಣಿ : 080-22161900/22161901/22161902

ಶಾಖೆಗಳು/ಮಳಿಗೆಗಳು
ನವಕರ್ನಾಟಕ, ಕ್ರೆಸೆಂಟ್ ರಸ್ತೆ , ಬೆಂಗಳೂರು - 560 001, ದೂರವಾಣಿ : 080-22161913/14, Email : nkpsales@gmail.com
ನವಕರ್ನಾಟಕ, ಕೆಂಪೇಗೌಡ ರಸ್ತೆ, ಬೆಂಗಳೂರು - 560 009, ದೂರವಾಣಿ : 080-22203106, Email : nkpkgr@gmail.com
ನವಕರ್ನಾಟಕ, ಗಾಂಧಿನಗರ, ಬೆಂಗಳೂರು - 560 009, ದೂರವಾಣಿ : 080-22251382, Email : nkpgnr@gmail.com
ನವಕರ್ನಾಟಕ, ಕೆ. ಎಸ್. ರಾವ್ ರಸ್ತೆ , ಮಂಗಳೂರು - 575 001, ದೂರವಾಣಿ : 0824-2441016, Email : nkpmng@gmail.com
ನವಕರ್ನಾಟಕ, ಬಲ್ಮಠ, ಮಂಗಳೂರು - 575 001, ದೂರವಾಣಿ : 0824-2425161, Email : nkpbalmatta@gmail.com
ನವಕರ್ನಾಟಕ, ರಾಮಸ್ವಾಮಿ ವೃತ್ತ , ಮೈಸೂರು - 570 024, ದೂರವಾಣಿ : 0821-2424094, Email : nkpmysuru@gmail.com
ನವಕರ್ನಾಟಕ, ಸ್ಟೇಷನ್ ರಸ್ತೆ , ಕಲಬುರಗಿ - 585 102, ದೂರವಾಣಿ : 08472-224302, Email : nkpglb@gmail.com

ಮುದ್ರಕರು : ಪ್ರಿಂಟೆಕ್ ಪ್ರಿಂಟರ್ಸ್, ಬೆಂಗಳೂರು - 560 079

0108174931 **ISBN 978-81-8467-714-0**

Published by Navakarnataka Publications Private Limited, Embassy Centre, 11, Crescent Road, P. B. 5159, Bengaluru - 560 001 (India). Ph : 080 - 22161900. Email : Navakarnataka@gmail.com

ಅರ್ಪಣೆ

ಜನಪರ ವಿಶಿಷ್ಟ ಪತ್ರಕರ್ತರಾದ
ಪಿ. ಸಾಯಿನಾಥ್‌ರವರಿಗೆ

ಸ್ಥಳ : ಪುದುಕೊಟ್ಟೈ, ತಮಿಳುನಾಡು

ಇಸವಿ : 1991

ಒಂದು ಅಸಾಧಾರಣ ಮತ್ತು ಅಭೂತಪೂರ್ವ ಪ್ರಯೋಗವೊಂದು ಇಲ್ಲಿ ನಡೆಯಿತು. ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ ಫಲವಾಗಿ ಒಂದು ಲಕ್ಷಕ್ಕೂ ಹೆಚ್ಚು ಅನಕ್ಷರಸ್ಥ ಗ್ರಾಮೀಣ ಮಹಿಳೆಯರು ಓದು – ಬರೆಹ ಕಲಿತದ್ದು ಮಾತ್ರವಲ್ಲ ಸೈಕಲ್ ಸವಾರಿಯನ್ನೂ ಕಲಿತರು. ಜಗತ್ತಿನ ಯಾವ ಭಾಗದಲ್ಲೂ ಮಹಿಳೆಯರಿಗೆ ಈ ಪ್ರಮಾಣದಲ್ಲಿ ಸ್ವಾತಂತ್ರ್ಯ ಮತ್ತು ಓಡಾಡುವ ಸಾಮರ್ಥ್ಯ ದೊರಕಿದ್ದೇ ಇಲ್ಲ. ಈ ಸ್ಫೂರ್ತಿದಾಯಕ ಘಟನೆಯನ್ನು ಅತ್ಯಾಕರ್ಷಕ ರೇಖಾಚಿತ್ರ ಕಥೆಯ ರೂಪದಲ್ಲಿ ಇಲ್ಲಿ ಸೆರೆಹಿಡಿಯಲಾಗಿದೆ.

ಮಹಿಳಾ ಸ್ವಾವಲಂಬನೆ ಮತ್ತು ಸಬಲೀಕರಣಕ್ಕೆ ಈ ಕೃತಿ ಒಂದು ಅಪೂರ್ವ ಕೊಡುಗೆ.

ಶೀಲಾ ರಾಣಿ ಚುಂಕತ್

ಶೀಲಾ ರಾಣಿ ಚುಂಕತ್‌ರವರು ತಮಿಳುನಾಡಿನ ಪುದುಕೊಟ್ಟೈನಲ್ಲಿ ಜಿಲ್ಲಾ ಕಲೆಕ್ಟರರಾಗಿ ಕೆಲಸ ಮಾಡುತ್ತಿದ್ದಾರೆ. ಬಹು ಚಟುವಟಿಕೆಯ ಯುವತಿಯಾಗಿ, ಮಹಿಳೆಯರ ಮೇಲಿನ ದೌರ್ಜನ್ಯಗಳಿಗೂ, ಮಹಿಳಾ ಸಬಲೀಕರಣಕ್ಕೂ ಹೆಚ್ಚು ಮನಮಿಡಿಯುತ್ತಾರೆ. ಜಿಲ್ಲಾ ಸಾಕ್ಷರತಾ ಸಮಿತಿಯ ಅಧ್ಯಕ್ಷೆಯಾಗಿ ಅಕ್ಷರ ಕಲಿಕೆಯ ಜೊತೆ ಸೈಕಲ್ ಕಲಿಕೆಗೂ ಒತ್ತು ನೀಡುತ್ತಾರೆ.

ಕಮಲೀ

ಕಮಲೀ ದಿಟ್ಟ ಯುವತಿ. ಬಡತನದಿಂದಾಗಿ ಅವಳಿಗೆ ಶಿಕ್ಷಣ ಮುಂದುವರೆಸಲಾಗಲಿಲ್ಲ. ಅವಳಿಗೆ ಸರಿ ಎನ್ನಿಸಿದ ವಿಚಾರಗಳಿಗೆ ದಿಟ್ಟ ನಿಲುವು ತೆಗೆದುಕೊಳ್ಳುತ್ತಾಳೆ.

ಅಮೀನಾ

ಅಮೀನಾಳು, ಕಮಲಿಯ ಬಾಲ್ಯ ಗೆಳತಿ. ಅವಳು ಬಲು ಧೈರ್ಯವಂತೆ ಮತ್ತು ಚಟುವಟಿಕೆಯ ವ್ಯಕ್ತಿ. ಅವಳು ಸಂಪ್ರದಾಯಸ್ಥ ಕುಟುಂಬದಲ್ಲಿ ಮದುವೆಯಾಗಿದ್ದಾಳೆ. ಅವಳು ತನ್ನ ಬಂಧನಗಳನ್ನು ಕಳಚಿಕೊಂಡು, ಸ್ವತಂತ್ರವಾಗಿ ನಡೆಯಲು ಹೋರಾಡುತ್ತಾಳೆ.

ರವಿ



ರವಿಯು ಕಮಲಿಯ ತಮ್ಮ : ಬಹಳ ತುಂಟ. ಅವನ ತುಂಟತನವನ್ನು ಎಲ್ಲರೂ ಮೆಚ್ಚುತ್ತಾರೆ. ಅವನು ಬಹಳ ಕುತೂಹಲದ ಸ್ವಭಾವದವನು. ಗೋಡೆ ಮತ್ತು ಮರ ಏರುವುದು ಅವನಿಗೆ ಇಷ್ಟ. ಪುದುಕೊಟ್ಟೈನ ಎಲ್ಲ ಸಮಾಚಾರಗಳೂ ಅವನಿಗೆ ಬೇಕು. ಇತರರಿಗೆ ಸಹಾಯ ಮಾಡುವ ಚೂಟಿ ಹುಡುಗ.

ನಮ್ಮ ಕಥೆ ಶುರುವಾಗುವುದು 1991ರಲ್ಲಿ, ಬೇಸಿಗೆಯ ಅದೊಂದು ದಿನ.
ಪುದುಕೊಟ್ಟೈ ಜಿಲ್ಲೆಯಲ್ಲಿ, ತಮಿಳುನಾಡಿನಲ್ಲಿ, ಇಂಡಿಯಾದಲ್ಲಿ.....

ಕಮಲಿಯ ತಮ್ಮ – ರವಿ. ಅವನಿಗೆ ಒಂಬತ್ತು ವರ್ಷ, ಕೋತಿ ಚೇಷ್ಟೆ ಜಾಸ್ತಿ. ಆದರೆ ಕಮಲಿಗೆ ಇಂದೇನೋ ಬೇರೆಯೇ ಆದ ವಿಷಯ ಇದೆ ಅನ್ನಿಸಿತು. ಅಪಘಾತ ಆಗಿದೆಯೇ? ಬೇರೆ ಏನೋ ಇದೆ.

ಅಮೀನಾ!
ಇಲ್ಲ!
ಈ ಅಲ್ಟ್ರಾಸೌಂಡ್ ರಿಪೋರ್ಟ್ ನೋಡಿದೆಯಾ. ನೀನು ಗರ್ಭಪಾತ ಮಾಡಿಸಿಕೊಳ್ಳಬೇಕು.
ಅಮೀನಾ
ಇಲ್ಲ! ದಯವಿಟ್ಟು ಬೇಡ.
HOS
ಕಮಲಿ, ಈಗ ಏನಾಗುತ್ತೆ? ಅವನು ಅವಳನ್ನು ಹೊಡೆದು ಹಾಕ್ತಾನಾ? ಅವಳಗೇ ನಾದರೂ ಆದರೆ?
ಅವಳಿಗೆ ಏನೂ ಆಗುವುದು ಬೇಡಪ್ಪ. ಆ 'ದುಷ್ಟ' ಗಂಡ ಅವಳಿಗೆ ಚಚ್ಚಿದರೆ, ಅವಳೇನು ಮಾಡುತ್ತಾಳೋ ನನಗೆ ಗೊತ್ತಿಲ್ಲ. ಅವಳನ್ನು ನೋಡಿಬರೋಣ ಬಾ.

ಕಮಲಿ ಮತ್ತು ರವಿ, ಗೆಳತಿ ಅಮೀನಾಳ ಮನೆಯ ಕಡೆ ಓಡಿದರು.

ಅಮ್ಮಾ!

ಡಬ್ ಡಬ್ ಡಬ್

ಅವರು ಬಾಗಿಲು ಬಡಿದರು. ಉತ್ತರವಿಲ್ಲ. ಅಮೀನಾ ಎಲ್ಲಿರಬಹುದು? ಅವಳಗೇನೂ ಆಗಿಲ್ಲ ತಾನೆ?

ಹೀ, ಹೀ,...

ಮಮಾಪ್ಟ

ಇಲ್ಲಿ ನೋಡು

OK

ಹುಡುಗಿ!

ಆ ಜಿಲ್ಲೆಯಲ್ಲಿ, ಜನಿಸಿದ ಮಗು ಹೆಣ್ಣೋ/ಗಂಡೋ ಎಂದು ತಿಳಿಯುವ, ಅಂಗ ನಿರ್ಧಾರ ಪರೀಕ್ಷೆ, ವ್ಯಾಪಕವಾಗಿತ್ತು. ಯುವ ಗರ್ಭಣಿಯರು ಮುಗ್ಧರಾಗಿದ್ದರು. ಇದು ಗರ್ಭವತಿಯರಿಗಾಗಿ, ಬರಲಿರುವ ಮಗುವಿನ ಬಗ್ಗೆ, ಖುಷಿ ಸಂಗತಿ ತಿಳಿಸುವ, ವೈದ್ಯ ವಿಧಾನ ಎಂದು ತಿಳಿದಿದ್ದರು.


ಕಮಲಿಗೆ ಮಿಂಚಿನಂತೆ ವಿಷಯದ ಅರಿವಾಯಿತು. 'ಹೆಣ್ಣು ಮಕ್ಕಳು ಬೇಡ. ಅವರೊಂದು ಹೊರೆ. ಅವರನ್ನು ಗರ್ಭದಲ್ಲೇ ಚಿವುಟಿಹಾಕುವುದು ಸೂಕ್ತ!'
ಆಸ್ಪತ್ರೆ +
ಇಲ್ಲಾ!!
ಅವಳು ಆಸ್ಪತ್ರೆಗೇ ನೇರವಾಗಿ ಹೋಗಬಹುದಾಗಿತ್ತಲ್ಲ ಎಂದು ತನ್ನನ್ನೆ ತಾನು ಹಳಿದುಕೊಂಡಳು ಕಮಲಿ. ಅಮೀನಾಗೆ ಅದು ಸಹಾಯವಾಗಬಹುದಿತ್ತೇ. ಈ ಕೊಲೆಯನ್ನು ತಪ್ಪಿಸಿ, ಆ ಹೆಣ್ಣು ಮಗುವನ್ನು ಉಳಿಸಬಹುದಿತ್ತೇ?
ಬಾ ರವಿ. ಮನೆಗೆ ಹೋಗೋಣ. ಇಲ್ಲಿರೋದ್ರಿಂದ ಪ್ರಯೋಜನವಿಲ್ಲ. ನಾವು ಆಮೇಲೆ ಬರೋಣ.
ಅಮೀನಾ ಮತ್ತು ಮಗು ಚೆನ್ನಾಗಿರಬಹುದೇ? ಅವರು ಚೆನ್ನಾಗಿರಲಪ್ಪಾ! ಅಮೀನಾಳ ಗಂಡನಿಗೆ ಯಾರಾದರೂ, ಸರಿಯಾಗಿ ಬುದ್ಧಿ ಹೇಳಬೇಕು. ಯಾರಿಗೂ ಇಂತಹ ಪಾಡು ಬರಬಾರದು.

ತಮಿಳುನಾಡಿನ, ಪುದುಕೊಟ್ಟೈ ಜಿಲ್ಲೆಯಲ್ಲಿ
'ಪ್ರಕೃತಿ ಚಿಕಿತ್ಸಾ ಕೇಂದ್ರ'ವು ಬಹಳ ಪ್ರಸಿದ್ಧವಾಗಿತ್ತು.
ಎಲ್ಲ ಪಿತೃಪ್ರಧಾನ ಸಮಾಜಗಳಲ್ಲಿ ಇದ್ದಂತೆ ಮಹಿಳೆಯ ಶಿಕ್ಷಣ, ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸಲಾಗಿತ್ತು. ಹೆಣ್ಣು ಮಕ್ಕಳ ಶಿಕ್ಷಣವು ಆದ್ಯತೆಯ ವಿಷಯವಲ್ಲ. ಹೆಣ್ಣು ಮಕ್ಕಳೆಂದರೆ ವರದಕ್ಷಿಣೆ, ಸಾಲ ಎನಿಸಿದ್ದವು. ಮೈಮುರಿಯುವ ಮನೆಗೆಲಸಕ್ಕೆ ಬೆಲೆ ಇರಲಿಲ್ಲ. ಒಂದೇ ಕೆಲಸಕ್ಕೆ, ಗಂಡಿಗಿಂತಲೂ, ಹೆಣ್ಣಿಗೆ ಕೂಲಿ ಕಡಿಮೆ ಇತ್ತು.
ಹೆಣ್ಣು ಮಕ್ಕಳ ಹಣೇಬರಹವನ್ನು – ಅವಳ ತಂದೆ, ಅಣ್ಣ ತಮ್ಮಂದಿರು ಮತ್ತು ಪತಿ ನಿರ್ಧರಿಸುತ್ತಿದ್ದರು. ಹುಟ್ಟಿನಿಂದ, ಸಾಯುವವರೆಗೆ ಹೆಣ್ಣು ಭಯ, ಶೋಷಣೆಗಳಿಗೆ ಒಳಗಾಗಿದ್ದಳು.
ಮೊಮೇಮೋ ಪ್ರತೇಕಾಯಿ
ಪುದುಕೊಟ್ಟೈನಲ್ಲಿ, ಡಾ॥ ಲಕ್ಷ್ಮಣ ಶರ್ಮರು, ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಿದರು. ಇವರನ್ನು ದೇಶದಲ್ಲಿ ಪ್ರಕೃತಿ ಚಿಕಿತ್ಸೆಯ ಪಿತಾಮಹರೆನ್ನುತ್ತಾರೆ. ಕಡಿಮೆ ತಿನ್ನಿ. ಸರಳ ಆಹಾರ ತಿನ್ನಿ. ಆಹಾರವು ಕಚ್ಚಾ ಆಗಿರಲಿ.
ನಿಮ್ಮ ಬಿಳಿ ಆಹಾರ
ನಿಮ್ಮ ಜೀವಕ್ಕೆ ಕುಠಾರ

ಕಲೆಕ್ಟರರ ಕಛೇರಿಯಲ್ಲಿ ಅದೊಂದು ಗಡಿಬಿಡಿಯ ದಿನ. ಶ್ರೀಮತಿ ಶೀಲಾ ರಾಣಿ ಚುಂಕತ್ ಎಂಬ ಯುವ, ಚುರುಕಾದ ಆಫೀಸರು, ಡಿಸ್ಟ್ರಿಕ್ಟ್ ಕಲೆಕ್ಟರರಾಗಿ ಬಂದಿದ್ದರು. ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ) ಅಡಿಯಲ್ಲಿ ಪುದುಕೊಟ್ಟೈಯ ಜಿಲ್ಲಾ ಸಾಕ್ಷರತಾ ಸಮಿತಿಯ ಅಧ್ಯಕ್ಷೆಯಾಗಿದ್ದರು. ರಾ.ಸಾ.ಮಿ (ರಾಷ್ಟ್ರೀಯ ಸಾಕ್ಷರತಾ ಮಿಷನ್) ದೇಶದ ಮೂಲೆ ಮೂಲೆಗಳಲ್ಲಿ, ಸಾಕ್ಷರತೆಯನ್ನು ಒಯ್ಯುವ ರಾಷ್ಟ್ರಮಟ್ಟದ ಪ್ರಯತ್ನವಾಗಿತ್ತು. ಇದೊಂದು ಕಷ್ಟದ ಕೆಲಸವಾಗಿತ್ತು. ಆದರೂ ಸಾಧಿಸಲೇಬೇಕಾಗಿತ್ತು. ಹಾಗಾಗಿ ಕಛೇರಿಯಲ್ಲಿ ಗಡಿಬಿಡಿಯ ವಾತಾವರಣ ಮೂಡಿತ್ತು.

ಸ್ವಾತಂತ್ರ್ಯ ಬಂದನಂತರ ಭಾರತವು ತನ್ನ ಜನತೆಗೆ ಆಹಾರ ನೀಡಲು ಸಾಧ್ಯವಾಯಿತು. ಆದರೆ ಸಾಕ್ಷರರನ್ನಾಗಿ ಮಾಡಲಾಗಲಿಲ್ಲ. ಜಗತ್ತಿನಲ್ಲಿ ಶಾಲೆಗೆ ಹೋಗದ ಅತಿ ದೊಡ್ಡ ಸಂಖ್ಯೆಯ ಜನಸಾಗರ ನಮ್ಮ ದೇಶದ್ದೇ ಆಗಿತ್ತು. ಸರ್ಕಾರದ ವಯಸ್ಕರ ಶಿಕ್ಷಣ ಸಮಿತಿಯ ಪಾಠ ಪ್ರವಚನಗಳು, ಕಾಗದದ ಮೇಲೆಯೇ ಉಳಿದಿದ್ದವು. ಮೇಲಿನ ಅಧಿಕಾರಿಗಳಿಂದ ಪ್ರಾಲನೆಗೊಂಡ ಸಾಕ್ಷರತಾ ಚಳುವಳಿಗಳು, ಕೆಳಗೆ ಇಳಿಯಲಿಲ್ಲ.

ಎರ್ನಾಕುಲಂನಲ್ಲಿ ಉಂಟಾದ ಗೆಲುವನ್ನು ಆಧರಿಸಿ, ಭಾರತ ಜ್ಞಾನ ವಿಜ್ಞಾನ ಸಮಿತಿ(ಬಿ.ಜಿ.ವಿ.ಎಸ್), ಪುದುಕೊಟ್ಟೈನಲ್ಲಿ ಸಂಪೂರ್ಣ ಸಾಕ್ಷರತಾ ಅಭಿಯಾನವನ್ನು ಯೋಜಿಸಿದರು.
ಪ್ರಸಿದ್ಧ ಶಿಕ್ಷಣ ತಜ್ಞರಾದ ಡಾ॥ ವಿ. ಚಿ. ಆತ್ರೇಯರವರು ಬಿಜಿವಿಎಸ್ ನ ರಾಜ್ಯ ಸಂಘಟಕರಾಗಿದ್ದರು. ಅವರು, ಉಪಾಧ್ಯಾಯರನ್ನೂ, ಸ್ವಯಂಸೇವಕರನ್ನೂ, ರೋಟರಿ ಲಯನ್ಸ್ ಕ್ಲಬ್‌ಗಳನ್ನೂ, ಧಾರ್ಮಿಕ ಗುಂಪುಗಳನ್ನೂ, ಬ್ಯಾಂಕ್ ಆಫೀಸರುಗಳನ್ನೂ ಈ ಚಳುವಳಿಗೆ ಸಂಘಟಿಸಿದರು. ಸಾಕ್ಷರತೆಯು ಇಡೀ ಸಮಾಜದ ಜವಾಬ್ದಾರಿಯಲ್ಲವೇ?

ಸಾಕ್ಷರತಾ ಚಳುವಳಿಗೆ ಜೀವದಾನ ಮಾಡಲು, ಸರ್ಕಾರವು ಎನ್.ಜಿ.ಒ.ಗಳನ್ನೂ (ಸರ್ಕಾರೇತರ ಸಂಸ್ಥೆಗಳು) ಜನತಾ ವಿಜ್ಞಾನ ಚಳುವಳಿಗಳನ್ನು (People Science Movement) ಈ ಪ್ರಯತ್ನದಲ್ಲಿ ಸೇರಿಸಿಕೊಂಡಿತು.
ಜನತಾ ವಿಜ್ಞಾನ ಚಳುವಳಿಯ ಕಾರ್ಯಕರ್ತರು ಜನತೆಯನ್ನು ಬಹುಸಂಖ್ಯೆಯಲ್ಲಿ ಸಂಘಟಿಸಲು ಶಕ್ತರಾದರು. ಜನಪದ ನಾಟಕಗಳು, ಹಾಡುಗಳು, ಭಾಷಣಗಳು ಮತ್ತು ಸ್ಲೈಡ್ ಶೋಗಳನ್ನು ಬಹಳ ಸೃಜನಶೀಲವಾಗಿಯೂ, ಶಕ್ತಿಯುತವಾಗಿಯೂ ಬಳಸಿದರು. ಇವುಗಳಲ್ಲಿ ಸಾಕ್ಷರತೆಯಿಂದಾಗುವ ಉಪಯೋಗಗಳನ್ನು ಪ್ರಚುರಗೊಳಿಸಿದರು. ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ (ಕೆ.ಎಸ್.ಎಸ್.ಪಿ) ಸಹಾಯದಿಂದ ಕೇರಳದ ಎರ್ನಾಕುಲಂ ಜಿಲ್ಲೆಯು, ದೇಶದ ಮೊದಲ ಸಂಪೂರ್ಣ ಸಾಕ್ಷರ ಜಿಲ್ಲೆಯಾಗಿ ಘೋಷಿಸಲ್ಪಟ್ಟಿತು. ಇದಾದ ಬಳಿಕ 'ಅಕ್ಷರ ಕೇರಳಂ' ಚಳುವಳಿಯಿಂದಾಗಿ 1991ರಲ್ಲಿ ಕೇರಳ ರಾಜ್ಯವು ಸಂಪೂರ್ಣ ಸಾಕ್ಷರ ರಾಜ್ಯವೆಂದು ಘೋಷಿತವಾಯಿತು.

ಪಾವ್ಲೋ ಫ್ರೈರೀರವರು ಬ್ರೆಜಿಲ್‌ನವರು. ಅವರು ಅಲ್ಲಿನ ಭೂಹೀನ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಓದಲು ಬರೆಯಲು ಕೇವಲ ೩೦ ದಿನಗಳಲ್ಲಿ ಕಲಿಸಲು ಶಕ್ತರಾದರು. ಬಡ ಜನತೆಯ ಜೀವನಾನುಭವಗಳ ತಳಹದಿಯನ್ನು ಆಧರಿಸಿದ ಕ್ರಾಂತಿಕಾರಕ ಶಿಕ್ಷಣ ಮಾರ್ಗವನ್ನು ಅನುಸರಿಸಲಾಯಿತು. ಚಿತ್ರಗಳು, ಫೋಟೋಗಳು, ಪದಗಳನ್ನು, ಆಯಾ ಶೋಷಿತ ಸಮುದಾಯಗಳಿಂದಲೇ ಆರಿಸಲಾಯಿತು.

'ಈ' ಎನ್ನುವುದು 'ಈಚ'ಯಾಗದೆ 'ಈಚಲು ಮರವಾಯಿತು'.

ಬಡ ಜನತೆಯ ಜೀವನದಿಂದಲೇ ಹುಟ್ಟಿಬಂದ ಪದಗಳಾದ್ದರಿಂದ ಅವು ತಕ್ಷಣವೇ ಜನಪ್ರಿಯತೆ ಗಳಿಸಿದವು. ಜನರನ್ನು ಬಹುಬೇಗನೆ ಸೆಳೆದುಕೊಂಡವು.

ಶೀಲಾ ರಾಣಿಯವರು ಸಾಕ್ಷರತೆಯ ಓದು, ಬರಿ ಎನ್ನುವುದಕ್ಕೆ ಸೈಕಲ್ ಕಲಿ ಎಂಬುದನ್ನೂ ಸೇರಿಸಿದರು.

ಬಿಜಿವಿಎಸ್‌ಗೆ ಶೀಲಾ ರಾಣಿಯವರು ಬೆನ್ನೆಲುಬಾಗಿ ನಿಂತರು. ಸಾಕ್ಷರತೆಯ ಸವಾಲಿಗೆ ಸರ್ಕಾರದ ಯಂತ್ರವನ್ನು ತೊಡಗಿಸಿದರು. ಎಲ್ಲ ಸ್ತರಗಳಲ್ಲೂ ಕೆಲಸಕಾರ್ಯಗಳನ್ನು ಹಂಚಿ ಆಯಾ ಕೆಲಸಗಳಿಗೆ ಜವಾಬ್ದಾರಿ ಹಂಚಿದರು. ಅವರಿಗೆ ಮಹಿಳೆಯ ಸಬಲೀಕರಣದ ಬಗ್ಗೆ ಸಹಾನುಭೂತಿ ಮತ್ತು ಶೋಷಣೆಯ ಬಗ್ಗೆ ಸಂವೇದನೆಗಳಿದ್ದವು.

ಅವರು ಕರೆ ನೀಡಿದರು :

"ಹುಡುಗನೊಬ್ಬನಿಗೆ ಕಲಿಸಿ
ಅವನು ಮಾನವನಾಗುತ್ತಾನೆ :
ಹುಡುಗಿಯೊಬ್ಬಳಿಗೆ ಕಲಿಸಿ
ಅವಳು ಜನಾಂಗಕ್ಕೆ ಕಲಿಸುತ್ತಾಳೆ"

ಜಿಲ್ಲೆಯಲ್ಲಿ ಸಾಕ್ಷರತೆಯ ಸಮೀಕ್ಷೆಯು
ಆಘಾತಕಾರಿಯಾಗಿತ್ತು.



ಬಿಜಿವಿಎಸ್ ಸಂಸ್ಥೆಯು ಸಾಕ್ಷರತಾ ಆಂದೋಳನವನ್ನು ಮುಂದಕ್ಕೆ ಒಯ್ದಿತು. ಕ್ರಾಂತಿಯ ಕ್ಷೋಭೆಯಿಲ್ಲದ ಸಮಾಜದಲ್ಲೂ ಸಹ ಸಾರ್ವಜನಿಕ ಶಿಕ್ಷಣ ಚಳುವಳಿಯನ್ನು ಹುಟ್ಟುಹಾಕಬಹುದು ಎಂದು ತೋರಿಸಿತು. ಜನತೆಯಲ್ಲಿ ಸ್ವಯಂಸೇವಾ ಮನೋಭಾವವೂ, ಒಳ್ಳೆಯತನವೂ ಇದೆ. ಇದನ್ನು ಚಳುವಳಿಗೆ ಬಳಸಿಕೊಳ್ಳಬಹುದು ಎಂದು ತಿಳಿಯಿತು. ಹೀಗೆ ಶುರುವಾದದ್ದು "ಅರಿವೊಳ ಇಯಕ್ಕಮ್" – ಜ್ಞಾನದ ಬೆಳಕಿನ ಚಳುವಳಿ. ಇದರಲ್ಲಿ ಜಾತಿ, ಭಾಷೆ, ಧರ್ಮಗಳ ಭೇದವಿರಲಿಲ್ಲ.

'ಅರಿವೊಳ' ಚಟುವಟಿಕೆಗಳಿಗೆ ಇಡೀ ಗ್ರಾಮಗಳೇ ಬೆಂಬಲ ನೀಡಿದವು. ಅಶಿಕ್ಷಿತರೆಂದು ತಿಳಿದ ಹಳ್ಳಿಗರಿಂದಲೇ ಹಾಡುಗಳೂ, ಕವಿತೆಗಳೂ, ಆಶುಭಾಷಣಗಳೂ ಹೊರಹೊಮ್ಮಿದವು. ಸಾವಿರಾರು ಸ್ವಯಂಸೇವಕರು ಇನ್ನಷ್ಟು ಮಂದಿಯನ್ನು ಚಳುವಳಿಯತ್ತ ಮನ ತಿರುಗಿಸಲು ಸಫಲರಾದರು. ತರಗತಿಗಳಲ್ಲಿ ಪಾಠಗಳು ಶುರುವಾದಂತೆ, ಚಳುವಳಿಗೆ ಮೌಲ್ಯ ಬರಲು ಶುರುವಾಯಿತು. ಪ್ರಚಾರ ಹೆಚ್ಚಿ ಮತ್ತಷ್ಟು ಸ್ವಯಂಸೇವಕರು ಬಂದು ಸೇರಿದರು. ಅವರ ಸರಳ ಘೋಷಣೆ ಒಂದೇ ಆಗಿತ್ತು.

"ಪ್ರತಿಯೊಬ್ಬರೂ ಹತ್ತು ಮಂದಿಗೆ ಕಲಿಸಬೇಕು"

ಅಂದು ಸಂಜೆ, ಕಮಲಿ ಮತ್ತು ರವಿ ಅವರುಗಳು ಊಟಕ್ಕೆ ನೆಲದ ಮೇಲೆ ಕುಳಿತಾಗ, ಇಬ್ಬರ ಮನಸ್ಸೂ ವ್ಯಗ್ರವಾಗಿತ್ತು.
ಕಮಲಿ, ಏನಾದರೂ ಸಮಾಚಾರ ತಿಳಿಯಿತೇ?
ಏನೂ ಇಲ್ಲ. ಹೆಂಗಸರ ಮೇಲೆ ಈ ಬಗೆಯ ಹಿಂಸೆ ಕೊನೆಯಾಗಲು ಏನು ಉಪಾಯ ಮಾಡಬಹುದು ಎಂದು ಯೋಚಿಸುತ್ತಿದ್ದೇನೆ. ಹೆಂಗಸರೇ ಏನಾದರೂ ಮಾಡಿ ಇಂತಹ ಕ್ರೌರ್ಯ ತಡೆಯಬಹುದೆ?
ನಾನೂ ಮತ್ತು ಅಮೀನಾ, ಇಬ್ಬರನ್ನೂ ಸ್ಕೂಲು ಬಿಡಿಸಿರದಿದ್ದರೆ ಚೆನ್ನಾಗಿತ್ತು. ಇಂತಹ ಕ್ರೌರ್ಯಗಳು ನಡೆಯುತ್ತಿರಲಿಲ್ಲ, ಚೆನ್ನಾಗಿ ಓದಿದ್ದರೆ, ನಮ್ಮ ಜೀವನವೂ ಚೆನ್ನಾಗಿರುತ್ತಿತ್ತು. "ಶಿಕ್ಷಣವು ಜೀವನವನ್ನು ಬದಲಿಸುತ್ತದೆ" ಎಂದು ನಮ್ಮ ಟೀಚರ್ ಹೇಳುತ್ತಿದ್ದರು. ನಾವು ಹೆಣ್ಣು ಮಕ್ಕಳೆಂದು ಶಾಲೆ ಬಿಡಿಸುವುದೇಕೆ?
ಕಮಲಿ, ನಮ್ಮ ಅಪ್ಪ, ಅಮ್ಮಂದಿರು ನಿನ್ನ ಬಾಳು ಹಾಳಾಗ ಬೇಕೆಂದು ಶಾಲೆ ಬಿಡಿಸಲಿಲ್ಲ. ನೀನೂ, ಅಮೀನಾ ಇಬ್ಬರೂ ಶಾಲೆ ಮುಗಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು?
ಅಪ್ಪ, ಅಮ್ಮ ಅವರಿಗೆ ಸರಿಯಾಗಿ ಕಂಡಿದ್ದನ್ನೇ ಮಾಡಿದರು.
ನಾವು ಹೆಂಗಸರಾಗಿ ಹುಟ್ಟಿದ ಮೇಲೆ ನಮ್ಮ ಹಣೆಬರಹವನ್ನು ಒಪ್ಪಿಕೊಳ್ಳಬೇಕು. ಅದು ನಮ್ಮ ತಪ್ಪಲ್ಲ. ಆದರೆ ನಾವು ಹೋರಾಡಬೇಕು.
ಸದ್ಯ ನೀನು ದುಃಖಪಡ್ತಾ ಇಲ್ಲ. ಅದೇ ನನಗೆ ಖುಷಿ.

ಆ ರಾತ್ರಿ, ಎರಡು ವಿಭಿನ್ನ ಸ್ಥಳಗಳಲ್ಲಿ, ಎರಡು ವಿಭಿನ್ನ ಕೊಠಡಿಗಳಲ್ಲಿ, ಇಬ್ಬರು ಮಹಿಳೆಯರು ತಮ್ಮ ಸಮುದಾಯದ ಬಗ್ಗೆ ಗಾಢ ಚಿಂತನೆ ನಡೆಸಿದರು. ಅವರ ಪ್ರಯತ್ನಗಳು ಬದಲಾವಣೆ ತರುತ್ತವೆಯೇ?


ಮಹಿಳೆಯರಲ್ಲಿ ಶೇ. 70 ಮಂದಿ ಅನಕ್ಷರಸ್ಥರು. ಮಹಿಳೆಯರು ಕಮರಿಯೊಳಗಿದ್ದಾರೆ. ಮನೆಯಲ್ಲೂ ಸಹ ಹೆಣ್ಣು ಮಕ್ಕಳಿಗೆ, ಗಂಡು ಮಕ್ಕಳಿಗಿಂತಲೂ ಊಟ ಕಡಿಮೆ ಸಿಗುತ್ತದೆ. ಮನೆಗೆ ಕಟ್ಟಿಗೆ, ನೀರು ತರಲು, ಹೆಣ್ಣು ಮಕ್ಕಳಿಗೆ ಶಾಲೆ ಬಿಡಿಸಲಾಗುತ್ತದೆ. ಮನೆಯಲ್ಲಿ ಸಣ್ಣ ಮಕ್ಕಳಿದ್ದಾಗಲೂ, ಅಡುಗೆಗೆ ಯಾರೂ ಇರದಿದ್ದಾಗಲೂ ಮೊದಲ ಆಯ್ಕೆ ಹೆಣ್ಣು ಮಕ್ಕಳಿಗೆ ಶಾಲೆ ಬಿಡಿಸಿ ಕೆಲಸಕ್ಕೆ ಹಾಕುವುದು. ನೇರವಾಗಿ ಹೇಳಬೇಕೆಂದರೆ ಹೆಣ್ಣು ಮಗು ಕಷ್ಟದಲ್ಲೇ ಹುಟ್ಟಿ ಗುಲಾಮಳ ಬಾಳು ಬಾಳುತ್ತಾಳೆ. ಆದರೆ ಮಹಿಳೆಯರೇ ಅರ್ಧ ಜಗತ್ತನ್ನು ಎತ್ತಿಹಿಡಿದಿದ್ದಾರೆ. ಅವರಿಗೆ ಖಂಡಿತವಾಗಿಯೂ ಒಳ್ಳೆಯ ಜೀವನದ ಹಕ್ಕಿದೆ. ಅವರ ಹಕ್ಕುಗಳಿಗಾಗಿ ಮಹಿಳೆಯರೇಕೆ ಒಗ್ಗಟ್ಟಾಗಿ ಹೋರಾಡಲಾಗಿಲ್ಲ? ಒಂದು ಕುಟುಂಬಕ್ಕೆ, ಶಿಕ್ಷಿತ ಮಹಿಳೆ ಬಹಳಷ್ಟು ಅನುಕೂಲ ಒದಗಿಸಬಲ್ಲಳು.


ಹೆಣ್ಣುಮಕ್ಕಳು ಹುಟ್ಟಿದಾಗಲೇ – ಇತರರ ಅಪ್ಪಣೆಗೆ ತಲೆಬಾಗಬೇಕೆಂದು ಬೆಳೆಸಲಾಗುತ್ತದೆ. ಅದನ್ನು ಅವರು ಪ್ರಶ್ನಿಸದೆ ಅನುಸರಿಸುತ್ತಾರೆ. ಮದುವೆಯ ನಂತರ ಗಂಡನ ಮಾತನ್ನೇ ಕೇಳಬೇಕೆಂದು ತಿಳಿಸಲಾಗುತ್ತದೆ. ತನಗೆ ಅನ್ಯಾಯವಾದರೂ ಸಹ ಪ್ರತಿಭಟಿಸಬಾರದೆಂದು ಹೇಳಲಾಗುತ್ತದೆ. ಇದೇ ನಮ್ಮ ವಿಧಿಯೇ? ಪರಿಸ್ಥಿತಿಯು ಹೀಗೆಯೇ ಇರುತ್ತದೆಯೇ? ಇರಬಹುದು. ಮಹಿಳೆಯರು ಮೌನದಿಂದಲೇ ಎಲ್ಲವನ್ನೂ ಅನುಭವಿಸಿಯಾರು.

ನಮ್ಮ ಧರ್ಮಗ್ರಂಥಗಳಲ್ಲಿ ದುರ್ಗ, ಕಾಳಿಗಳಂತಹ ಸಶಕ್ತ ಹೆಣ್ಣು ದೇವತೆಗಳಿವೆ. ಆದರೆ ವಾಸ್ತವವು ಬೇರೆಯೇ ಆಗಿದೆ. ವಾಸ್ತವ ಜಗತ್ತಿನಲ್ಲಿ ಮಹಿಳೆಯರಿಗೆ ಯಾವ ದನಿಯೂ ಇಲ್ಲ. ಗಂಡಸರು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಮಹಿಳೆಯರು ಅದನ್ನು ಅನುಸರಿಸಿ ನಡೆಯುತ್ತಾರೆ. ಸಂಪ್ರದಾಯವು ಬದಲಾಗದ ಜಡತೆಯಿಂದ ಕೂಡಿದೆ. ಹಾಗಾಗಿ ಮಹಿಳೆಯ ಶೋಷಣೆಯು ನಿಂತಲ್ಲಿಯೇ ನಿಂತಿದೆ.


ಪುದುಕೊಟ್ಟೈನ ಮಹಿಳೆಯರು ಓದು ಬರಹ ಕಲಿತರೆ ಅವರಿಗೆ ಒಳ್ಳೆಯದಾಗುತ್ತದೆಂದು ನನಗನ್ನಿಸುತ್ತದೆ. ಕಲಿಕೆಯು ಅವರ ಮನಸ್ಸುಗಳನ್ನು ತೆರೆದು, ಅವರ ಕಲ್ಪನೆಗಳಿಗೆ ರೆಕ್ಕೆಮೂಡಿಸುತ್ತದೆ. ಕಲಿಕೆಯಿಂದ ಮಹಿಳೆಯರ ಜೀವನಶೈಲಿಯು ಬದಲಾಗಿ, ಒಳ್ಳೆಯದನ್ನು ತರುತ್ತದೆ.

ಮಾರನೆಯ ದಿನ ಶೀಲಾ ರಾಣಿಯವರು ಸಂಪೂರ್ಣ ಸಾಕ್ಷರತಾ ಆಂದೋಳನದ ಕಾರ್ಯವನ್ನು ಸಂಘಟಿಸಲು ಸಭೆ ಕರೆದರು.
ಮೇಡಂ, ಈ ಕಾರ್ಯಕ್ರಮ ಒಳ್ಳೆಯ ಗೆಲುವು ಕೊಡಬಹುದು ಎನ್ನಿಸುತ್ತದೆ. ಬಿಜಿವಿಎಸ್‌ನ ಸ್ವಯಂ ಸೇವಕರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರುಗಳು ಈಗಾಗಲೇ ಕಾರ್ಯ ಕ್ರಮದ ಹಂದರವನ್ನು ಕಟ್ಟಿದ್ದಾರೆ. ಆದರೆ ಈಗಿನ ತುರ್ತು ಇರುವುದು ಈ ಆಂದೋಳನವನ್ನು ಮುಂದಕ್ಕೆ ಕೊಂಡೊಯ್ಯಬಲ್ಲ ಯುವಕರು ಮತ್ತು ಸ್ವಯಂಪ್ರೇರಿತ ಮಂದಿಯನ್ನು ಸಂಘಟಿಸುವುದು. ನಾವು ಈ ಆಂದೋಳನವನ್ನು ಒಂದು ಕಾಲದ ಮಿತಿಯೊಳಗೆ ಸಾಧಿಸಬೇಕಾಗಿದೆಯೆಂಬುದನ್ನು ಮರೆಯಬಾರದು.
ನಮಗೆ ದೃಢವಾದ ನಿಬಂಧನೆ ಕೊಡಿ
ಪುದುಕೊಟ್ಟೈನ ಪೂರ್ವದಲ್ಲಿರುವ ಬಾಲಕರ ಶಾಲೆಯ ಮುಖ್ಯೋಪಾಧ್ಯಾಯರು ನನಗೆ ಗೊತ್ತಿದ್ದಾರೆ. ಅವರ ಶಾಲೆಯ ಹಿರಿಯ ವಿದ್ಯಾರ್ಥಿಗಳನ್ನು ಕಳುಹಿಸಿ ಕೊಡಲು ಕೇಳುತ್ತೇನೆ. ಅನಕ್ಷರರು ಇರುವ ದೂರದ ಹಳ್ಳಿಗಳಿಗೆ ಹೋಗಲು ನಮಗೆ ಸ್ವಯಂಸೇವಕರು ಬೇಕಾಗಿದೆ. ಸಮಾಜದ ಎಲ್ಲ ಸ್ತರಗಳ ಜನತೆಯ ಸೃಜನಶೀಲ ಸಹಕಾರವು ನಮಗೆ ಬೇಕಾಗಿದೆ. ಶಾಲೆ ಬಿಡುವವರನ್ನು ಕನಿಷ್ಠ ಸಂಖ್ಯೆಗೆ ಇಳಸಬೇಕಾಗಿದೆ.

ಒಳನಾಡಿನಲ್ಲಿ ಮಹಿಳೆಯರೇ ಅನಕ್ಷರಸ್ಥರಾಗಿದ್ದಾರೆಂದು ನಮ್ಮ ಸಮೀಕ್ಷೆಯು ತಿಳಿಸುತ್ತದೆ. ಆದ್ದರಿಂದ ನಾವು ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡು ಆಂದೋಳನ ನಡೆಸಬೇಕಾಗಿದೆ. ಅಂದರೆ ಮಹಿಳೆಯು ಎದುರಿಸುವ ಸಮಸ್ಯೆಗಳಾದ – ಅನಕ್ಷರತೆ, ಲಿಂಗಭೇದ, ಶಾಲೆ ಬಿಡುವುದು, ಅಪೌಷ್ಟಿಕತೆ ಮುಂತಾದುವುಗಳು. ಈ ಚಳುವಳಿಯು ಗೆಲುವು ಸಾಧಿಸಬೇಕಾದರೆ, ಮಹಿಳೆಯರೇ ಕೇಂದ್ರಬಿಂದುವಾಗಿರುತ್ತಾರೆ. ಹಾಗಾಗಿ ಮಹಿಳೆಯರನ್ನೇ ಸಂಘಟಿಸೋಣ.
ಆದರೆ ಮಹಿಳೆಯರು ದೂರದ ಹಳ್ಳಿಗಳಿಗೆ ಹೋಗುವುದು ಹೇಗೆ? ಅವರು ಬೈಕ್ ಓಡಿಸುವುದಿಲ್ಲವಲ್ಲ.
ಮಹಿಳೆಯರಿಗೆ ಬೈಕ್ ಕಲಿಸೋಣ. ಗಂಡಸರು ದ್ವಿಚಕ್ರ ವಾಹನಗಳನ್ನು ಓಡಿಸುತ್ತಾರೆ. ಹೆಂಗಸರು ಹಿಂದೆ ಕೂಡುತ್ತಾರೆ. ಮಹಿಳೆಯರನ್ನು ನಿಜಕ್ಕೂ ಹೊತ್ತು ಓಡಾಡುತ್ತಾರೆ. ದ್ವಿಚಕ್ರ ವಾಹನಗಳಿದ್ದೂ, ಮಹಿಳೆಯರಿಗೆ ಅದರ ಅನುಭವ ದಕ್ಕಲಿಲ್ಲ. ಹುಡುಗರು ಹೇಗೋ ಮಾಡಿ ಬೈಕ್ ಕಲಿತುಬಿಡುತ್ತಾರೆ. ಆದರೆ ಹುಡುಗಿಯರಿಗೆ ಅದು ಸಾಧ್ಯವಾಗುವುದಿಲ್ಲ. ಬೈಕ್ ಓಡಿಸಲು ಹುಡುಗಿಯರಿಗೆ ಯಾರೂ ಕಲಿಸುತ್ತಿಲ್ಲ. ಹೀಗಾಗಿ ಓಡಾಟಕ್ಕೆ ಅವರು ಗಂಡಸರ ಮೇಲೆ ಅವಲಂಬನೆಯಾಗಲೇಬೇಕು. ಇದು ಅವರಿಗೆ ಕೀಳರಿಮೆಯನ್ನೂ, ಸ್ವಸಾಮರ್ಥ್ಯದ ಅಪನಂಬಿಕೆಯನ್ನೂ ಉಂಟುಮಾಡುತ್ತದೆ. ನಿಧಾನವಾಗಿ ಈ ಕೀಳರಿಮೆಯು ಗಟ್ಟಿಯಾಗಿ ಬಿಡುತ್ತದೆ. ಹುಡುಗರು ಸೈಕಲ್ ತುಳಿಯುತ್ತಾರೆ. ಹುಡುಗಿಯರು ನಡೆದುಕೊಂಡೇ ಹೋಗುತ್ತಾರೆ. ಈ ಸಂಪ್ರದಾಯವನ್ನು ನಾವು ಮುರಿಯಬೇಕು. ಹುಡುಗಿಯರು ಸೈಕಲ್ ಏರುವಂತೆ ಮಾಡಲೇಬೇಕು. ಸಾಕ್ಷರತೆಯಲ್ಲಿ ಕಲಿಕೆಯ ಜೊತೆಗೆ, ಸೈಕಲ್ ತುಳಿಯುವುದನ್ನೂ ಕಲಿಸೋಣ. ಮಹಿಳೆಯರಿಗೆ ಚಕ್ರಗಳನ್ನು ಕೊಡೋಣ.
ಚಲನೆ
ಸ್ವಾತಂತ್ರ್ಯ
ಮನೋಬಲ
ಕಲಿಕೆಯ ಹಸಿವು


ನಾವು ಸೈಕಲ್ ಕಲಿಸುವುದನ್ನೂ ಸಾಕ್ಷರತೆಗೆ ಸೇರಿಸೋಣ. ಸೈಕಲ್ ಕಲಿಯುವ ಹುಡುಗಿಯ ಸ್ವ – ಮೌಲ್ಯ ಹೆಚ್ಚುತ್ತದೆ. ಸೌದೆಯಿರಲಿ, ನೀರೇ ಆಗಿರಲಿ ಸೈಕಲ್ ಕ್ಯಾರಿಯರ್‌ನಲ್ಲಿಟ್ಟು ತರಬಹುದಲ್ಲ. ಅಲ್ಲದೆ ತರಕಾರಿಯನ್ನು ಎಲ್ಲಿ ಬೆಲೆ ಸಿಗುತ್ತದೆಯೋ ಅಲ್ಲಿಗೆ ಸಾಗಿಸಿ ಮಾರಬಹುದಲ್ಲ. ಆಗ ಮಹಿಳೆ ಹೆಚ್ಚು ಸಬಲಳಾಗುತ್ತಾಳೆ. ಈ ಸ್ವಾತಂತ್ರ್ಯವು ಅವಳಿಗೆ ಸ್ವಂತ ನಿರ್ಧಾರಗಳನ್ನು ಮಾಡಲು ಬಲ ನೀಡುತ್ತದೆ. ಇಷ್ಟನ್ನು ಸಾಧಿಸಲು ಬಹಳ ಕಾಲ ಬೇಕಾಗಬಹುದು, ಬಹಳ ಕಷ್ಟವೂ ಆಗಬಹುದು. ಆದರೆ ಅಸಾಧ್ಯವೇನಲ್ಲ. ಪ್ರಯತ್ನಿಸಿ ನೋಡಬಹುದಲ್ಲ!

ಪುದುಕೊಟ್ಟೈನ ಹೆಂಗಸರು ಸೈಕಲ್ ಕಲಿಯಲು ಇಷ್ಟಪಡುತ್ತಾರೆ. ಇದರಿಂದ ಅತಿ ಬಡ ಹೆಂಗಸಿಗೆ ಹೆಚ್ಚು ಲಾಭವಾಗುತ್ತದೆ. ಲಿಂಗಭೇದ ಮತ್ತು ವರ್ಗಭೇದಗಳಿಂದ ಅವರನ್ನು ಮುಕ್ತವಾಗಿಸುತ್ತದೆ. ಸೈಕಲ್ಲುಗಳು ಸಾಕ್ಷರತೆಯ ಆಂದೋಳನಕ್ಕೆ ಹೆಚ್ಚು ಮೆರುಗನ್ನು ಕೊಡುತ್ತವೆ.
ಹಾ! ನೋಡೋಣ.

ಹೀಗೆ ಶುರುವಾಯಿತು ಪುದುಕೊಟ್ಟೈನ ಬೈಸಿಕಲ್ ಕ್ರಾಂತಿ. ಸ್ವಲ್ಪ ದಿನಗಳಲ್ಲೇ ಚಿಕ್ಕ ಹುಡುಗಿಯರೂ, ಕಲ್ಲು ಕ್ವಾರಿಯ ಹೆಂಗಸರೂ, ಕೃಷಿ ಕಾರ್ಮಿಕರೂ ಬೈಸಿಕಲ್ ತುಳಿಯತೊಡಗಿದರು. ಅವರು ಅಕ್ಷರವನ್ನೂ ಕಲಿಯಲು ಶುರು ಮಾಡಿದರು. ಆದರೆ ಅವರಿಗೆ ಇಷ್ಟವಾದದ್ದು ಸೈಕಲ್ಲೇ. ಸೈಕಲನ್ನು ಮಾತ್ರವಲ್ಲದೆ ಅವರು ತಮ್ಮ ಭವಿಷ್ಯವನ್ನು ನಿಯಂತ್ರಿಸತೊಡಗಿದರು.

ಆಂದೋಳನದಲ್ಲಿ ಇದೊಂದು ಪ್ರಚಲಿತ ಘೋಷಣೆಯಾಗಿತ್ತು.

ಚಂದ್ರನಲ್ಲಿಂದು ಮಾನವನ ಹೆಜ್ಜೆಯಿದೆ.
ಇನ್ನೂ ಹೆಬ್ಬೆಟ್ಟು ಒತ್ತುವ
ನಿನಗೆ ನಾಚಿಕೆ ಬೇಡವೇ!

ರಾ. ಸಾ. ಮಿ.

ರಾಷ್ಟ್ರೀಯ
ಸಾಕ್ಷರತಾ
ಮಿಷನ್

1. ಸಾಕ್ಷರತೆ

2. ಗಣಿತ ಸಾಕ್ಷರತೆ

3. ಕಾರ್ಯ ಕ್ಷಮತೆ

4. ಅರಿವು

5. ಚಲನೆ

ಕಲ್ಲು ಒಡೆಯುವ ಮಹಿಳೆಯು ಹೀಗೆಂದಳು –
"ನನಗೆ ಸೈಕಲ್ ಕಲಿತಾಗಿನಿಂದ ಅನೇಕ ಅಡೆತಡೆಗಳನ್ನು ಮೆಟ್ಟಿದಂತಾಗಿದೆ – ಆಂಗಭೇದ, ವಯಸ್ಸು, ಜಾತಿ ಮತ್ತು ವರ್ಗ ಇತ್ಯಾದಿ. ನನ್ನಂತಹ ಬಡ ದಲಿತ ಹೆಂಗಸಿಗೆ ಸೈಕಲ್ ತುಳಿದು ಬೀದಿಯಲ್ಲಿ ಚಲಿಸುವ ಮಾತು ಹಾಗಿರಲಿ, ಅದನ್ನು ಮುಟ್ಟುವುದೂ ಸಾಧ್ಯವಿರಲಿಲ್ಲ. ನಾನು ಈಗ ಕಂಟ್ರಾಕ್ಟರುಗಳ ಬಳಿ ಸಮನಾಗಿ ನಿಂತು ಮಾತನಾಡಬಲ್ಲೆ. ಅವರ ಎದುರಿಗೂ ಸೈಕಲ್ ತುಳಿದು ಮುಂದೆ ಸಾಗಬಲ್ಲೆ !

ಪೂರ್ಣ ಸಾಕ್ಷರತಾ ಕಾರ್ಯಕ್ರಮವು ಈ ಅಂಶಗಳನ್ನು ಒಳಗೊಂಡಿತ್ತು.

1. ರಾಜನೀತಿಯನ್ನು ರೂಪಿಸುವವರ ರಾಜಕೀಯ ಬದ್ಧತೆ.
2. ಕಲಿಯುವವರ ಮತ್ತು ಸಮುದಾಯಗಳ ಭಾಗವಹಿಸುವಿಕೆ.
3. ಸ್ವಯಂ ಸೇವಕರ ಹುಮ್ಮಸ್ಸು.
4. ಸರ್ಕಾರವು ಕೊಡಮಾಡಿದ ಮೂಲ ಸೌಕರ್ಯಗಳು.
5. ಕಾರ್ಯಕ್ರಮದ ತೀರ್ಮಾನಗಳ ಹೊಂದಾಣಿಕೆಯ ಸಾಮರ್ಥ್ಯ.
6. ಸಮಯಬದ್ಧ ಕಾರ್ಯಕ್ರಮ.


ಭಾರತದಲ್ಲಿ ಸೈಕಲ್ ಬಡಜನತೆಯ ವಾಹನವಾಗಿದೆ. ದವಸ ಧಾನ್ಯಗಳು, ಉರಿಸಲು ಕಟ್ಟಿಗೆ, ಕುಡಿಯುವ ನೀರು ಮತ್ತು ಹಾಲಿನ ಡಬ್ಬಗಳನ್ನು ಸಾಗಿಸಲು ಬಳಸುತ್ತಾರೆ. ಸೈಕಲ್‌ನ ಕ್ಯಾರಿಯರ್‌ಗೆ ಒಂದು ದೊಗಲೆ ಬ್ಯಾಗನ್ನು ತೂಗಿಹಾಕಿದರೆ ಸಣ್ಣದೊಂದು ಅಂಗಡಿ ಇದ್ದಂತೆಯೇ. ಒಮ್ಮೊಮ್ಮೆ ಇಡೀ ಸಂಸಾರವೇ ಸೈಕಲ್ಲಿನ ಮೇಲೆ ಚಲಿಸುತ್ತದೆ.
ಬೈಸಿಕಲ್
ನಿಜವಾದ ಹೀರೋ
ಮಾನವನ ಇದುವರೆಗಿನ ಸಂಶೋಧನೆಗಳಲ್ಲಿ ಬೈಸಿಕಲ್ ಅತ್ಯಂತ ಮಿತಶಕ್ತಿ ಬಳಕೆಯ ಸಾಧನವಾಗಿದೆ. ಅದು ಯಾವುದೇ ಉರುವಲನ್ನು ಬಳಸುವುದಿಲ್ಲ. ಯಾವುದೇ ಪ್ರದೂಷಣೆ ಉಂಟುಮಾಡುವುದಿಲ್ಲ. ಇಂಗಾಲದ ಹೆಜ್ಜೆಗುರುತುಗಳನ್ನು ಬಿಟ್ಟುಹೋಗುವುದಿಲ್ಲ....
ಅಮೆರಿಕದಲ್ಲಿ ಉಂಟಾದ ಮಹಿಳಾ ವಿಮೋಚನಾ ಚಳುವಳಿಯಲ್ಲೂ ಸಹ ಬೈಸಿಕಲ್ ಸ್ವತಂತ್ರ ಮತ್ತು ಸ್ವಾವಲಂಬನೆಗಳ ಸಂಕೇತವಾಗಿತ್ತು. ಪುದುಕೊಟ್ಟೈನಲ್ಲೂ ಸಹ ಅದು ಮಹಿಳಾ ಸಂಘರ್ಷದ ರಾಜಕೀಯ ಸಂಕೇತವಾಯಿತು.
ಹೆಚ್ಚು ಸಂಬಳ ಗಳಿಸುವವರು ಹೆಚ್ಚು ತಿನ್ನುತ್ತಾರೆ. ದುಬಾರಿ ಹೋಟೆಲ್ಲುಗಳಲ್ಲಿ ದೇಹಕ್ಕೆ ಬೇಡದ ಜಂಕ್‌ಫುಡ್ ತಿನ್ನುತ್ತಾರೆ. ಹೆಚ್ಚು ಗಳಿಕೆ ಇದ್ದಾಗ ದೇಹವೂ ತೂಕವಾಗುತ್ತದೆ. ಬಳಿಕ ಜಿಮ್‌ಗಳಿಗೆ ಮತ್ತು ಹೆಲ್ತ್ ಸ್ಪಾಗಳಿಗೆ ಈ ಜನ ಎಡತಾಕುತ್ತಾರೆ. ಗಳಿಕೆಯೆಲ್ಲ ಇಲ್ಲಿ ಹರಿಯುತ್ತದೆ.
ಬೈಸಿಕಲ್‌ಗಳು ಬಹಳ ಅಗ್ಗ ಮತ್ತು ಸುರಕ್ಷಿತ ವಾಹನಗಳಾಗಿವೆ. ಒಂದಿಷ್ಟು ಹಣ ಕೂಡಿಟ್ಟುಕೊಂಡು ಬಡವರೂ ಸಹ ಸೈಕಲ್ ಕೊಳ್ಳಬಹುದಾಗಿದೆ.
ಬೈಸಿಕಲ್ ಅನ್ನು ಎಲ್ಲಿ ಬೇಕಾದರೂ ಓಡಿಸಬಹುದು. ಬಯಲು, ಬೆಟ್ಟ ಗುಡ್ಡಗಳು, ಧೂಳಿನ ರಸ್ತೆಗಳು, ಸಣ್ಣ ತೊರೆಗಳು – ಹೀಗೆ ಎಲ್ಲದಕ್ಕೂ ಸೈ. ದೇಹಕ್ಕೂ ಸಹ ಒಳ್ಳೆಯ ವ್ಯಾಯಾಮವಾಗುತ್ತದೆ. ನಿಮ್ಮ ಮನೆಯಲ್ಲೊಂದು ಜಿಮ್ ಇದ್ದಂತೆ. ಇದಕ್ಕೆ ದೇಖರೇಖಿ ಕಡಿಮೆ. ಆದರೂ ಉಪಯೋಗವೇ ಜಾಸ್ತಿ.
ಸೈಕಲ್‌ನಲ್ಲಿ ಇತರ ಯಂತ್ರಗಳಂತೆ ಕ್ಲಿಷ್ಟ ವಿನ್ಯಾಸವಿಲ್ಲ. ಹೆಚ್ಚುವರಿ ಭಾಗಗಳಿಲ್ಲ. ಯಾರೊಬ್ಬರೂ ಬೈಸಿಕಲ್ ಬಿಚ್ಚಿ ಮತ್ತೆ ಜೋಡಿಸಬಹುದು. ಒಬ್ಬರ ಭುಜದ ಮೇಲೆ ಒಯ್ಯಬಹುದು. ಸಣ್ಣ ಪುಟ್ಟ ದೂರಗಳಿಗೆ ಸೈಕಲ್ಲೇ ಸಾಕು. ಜನದಟ್ಟಣೆಯ ಬಸ್‌ಗಳು ಬೇಡವೇ ಬೇಡ.

ಪುದುಕೊಟ್ಟೈನಲ್ಲಿ ಸಾಕ್ಷರತೆಯ ತರಗತಿಗಳು ನಿಯತವಾಗಿ ನಡೆಯತೊಡಗಿದವು. ಕಲಿಯುವ ವ್ಯಕ್ತಿಯ ಮನೆಯ 200 ಮೀಟರ್ ಹತ್ತಿರದಲ್ಲೇ ತರಗತಿಗಳಿದ್ದವು. ವಾರದಲ್ಲಿ ಐದಾರು ಬಾರಿ, 90 ನಿಮಿಷಗಳ ಅವಧಿಯ ಕ್ಲಾಸುಗಳಲ್ಲಿ, ಸ್ವಯಂ ಸೇವಕರು ತರಗತಿಗಳನ್ನು ನಡೆಸಿದರು. ಮಂದಿರ, ಮಸೀದಿ, ಮನೆಯಂಗಳ, ದನದ ಕೊಟ್ಟಿಗೆ, ರಸ್ತೆಯ ದೀಪದಡಿಯೂ ಬಿಡದೆ ಸೀಮೆಎಣ್ಣೆ ಬುಡ್ಡಿ ದೀಪದಲ್ಲಿ ತರಗತಿಗಳಾದುವು.



ನವಸಾಕ್ಷರಳಾದ ವಸಂತ ನುಡಿದದ್ದು ಹೀಗೆ. "ನನಗೆ ಓದುವುದು ಅಭ್ಯಾಸವಾಗಿ ಬಿಟ್ಟಿದೆ. ಕೈಗೆ ಸಿಕ್ಕಿದ್ದನ್ನೆಲ್ಲ ಓದತೊಡಗುತ್ತೇನೆ. ಬೀದಿಯ ಜಾಹೀರಾತುಗಳು, ಕಾಗದ ಪೊಟ್ಟಣಗಳಲ್ಲಿನ ವೃತ್ತಪತ್ರಿಕೆಯ ಸುದ್ದಿ" – ಹೀಗೆ ಎಲ್ಲವನ್ನೂ ಕಲಿತವರಲ್ಲಿ ಮುಕ್ಕಾಲು ಮಂದಿ ಸ್ತ್ರೀಯರೇ ಆಗಿದ್ದರು.

ಒಂದು ದಿನ ಮುಂಜಾನೆ ಸಾಕ್ಷರತಾ ಕ್ಯಾಂಪ್‌ಗೆ ಗುಟ್ಟಾಗಿ ಒಬ್ಬರು ಬಂದರು. ಅವನೇ ರವಿ. ಗೋಡೆಯ ಮೇಲೆ ಹತ್ತಿ ಏನಾಗುತ್ತಿದೆಯೆಂದು ಇಣುಕಿ ನೋಡಿದ. ಎಷ್ಟೊಂದು ಮಹಿಳೆಯರು ಓದು, ಬರಹ ಕಲಿಯುತ್ತಿರುವುದು ನೋಡಿ ಅವನಿಗೆ ರೋಮಾಂಚನವಾಯಿತು.

ಕಮಲಿ!!
ಮಹಿಳೆಯರಿಗೆ ಇನ್ನು ಮುಂದೆ ತರಗತಿಗಳು ಸಿಗುತ್ತವೆಯಲ್ಲ. ಎಷ್ಟು ಒಳ್ಳೆಯದು. ರವಿಗೆ ಬಹಳ ಆನಂದವಾಯಿತು. ಅವನ ಕಣ್ಣಲ್ಲಿ ಮಿಂಚು ಹೊಳೆಯಿತು. ಕಮಲಿಯನ್ನು ಇಲ್ಲಿಗೆ ಕರೆ ತಂದರೆ ! ಅವಳಿಗೂ ರೋಮಾಂಚನವಾಗ ಬಹುದಲ್ಲವೇ?
ಹೇ ಕಮಲೀ
ಏನು?
ನಾನು ಈಗ ಕಂಡಿದ್ದು, ನಿನಗೆ ನಂಬಿಕೆಯೇ ಬರುವುದಿಲ್ಲ. ಈಗಲೇ ಬಾ. ಬೇಗ!

ವಾವ್ಹ್
ಆಗಲೇ ಕಮಲಿಯು ಸಾಕ್ಷರತೆಯ ತರಗತಿಗೆ ಸೇರಲು ಬಯಸಿದಳು.
ಸ್ವಾಗತ !!
ವರ್ಷಗಳ ಕೆಳಗೆ ಶಾಲೆಯಲ್ಲಿದ್ದಂತೆಯೇ ಅನ್ನಿಸಿ ಖುಷಿಯಾಯಿತು. ಅವಳಿಗೆ ಓದು/ಬರಹ ಬರುತ್ತಿರಲಿಲ್ಲ. ತರಗತಿಗಳಿಗೆ ಹೋಗುವುದು ಆನಂದ ನೀಡಿತು. ಆದರೆ ಅವಳಿಗೆ ಅಮೀನಾಳ ಬಗ್ಗೆಯೇ ಯೋಚನೆ. ಅವಳ ಆತ್ಮೀಯ ಗೆಳತಿ ಹೇಗಿದ್ದಾಳೆ?

ಸ್ವಲ್ಪ ದಿನಗಳಲ್ಲೇ ಸೈಕಲ್‌ನ ಬಗ್ಗೆ ಅನೇಕ ಹಾಡುಗಳು ಹುಟ್ಟಿಕೊಂಡವು.

ಸೈಕಲ್ ಕಲೀ ತಂಗೀ ಸೈಕಲ್ ಕಲೀ
ಸುಗಮ ಜೀವನಕ್ಕೆ ಸೈಕಲ್ ಕಲೀ
ಬದಲಿದೆ ಕಾಲ ತಂಗೀ, ಸೈಕಲ್ ತುಳೀ
ಪೆಡಲಿನ ಮೇಲೆ ಗೆಜ್ಜೆಯ ಕಾಲು
ಕ್ಯಾರಿಯರ್‌ನಿಂದಿಳಿದ ಗಂಡಿನ ಕಾಲು
ಸೈಕಲ್ ಮೇಲೆ ಸೀರೆಯ ಮೆರಗು
ನೋಡುವ ಕಂಗಳ ತುಂಬಾ ಬೆರಗು
ಸೈಕಲ್ ತುಳಿ ತಂಗೀ ಸೈಕಲ್ ಕಲೀ

ಹೆಂಗಸರಿಗೆ ಖುಷಿ. ಗಂಡಸರಿಗೆ ಅಲ್ಲ. ಅವರು ಹೆಂಗಸರಿಗೆ ಬಯ್ಯತೊಡಗಿದರು. ಅವರ ದರ್ಬಾರಿಗೆ ಎಲ್ಲಿ ಅಡ್ಡವಾಗುತ್ತದೋ ಎಂದು ಹೆದರಿದರು.

ನಾನೆಲ್ಲಿ ಬೀಳುವೆನೋ ಎಂದು ಭಯಪಟ್ಟಿದ್ದೆ. ಸೈಕಲ್‌ನಲ್ಲಿ ಹೋಗುವುದು ಎಷ್ಟು ಖುಷಿ.

ಅವಳಿಗೆ ಎಷ್ಟು ಧೈರ್ಯ?

'ಸ್ತ್ರೀಯರು ಹಿಂದಿನ ಕ್ಯಾರಿಯರ್ ಮೇಲೆ ಕುಳಿತರೆ ಸಾಕು. ಮುಂದಿನ ಸೀಟಿಗೆ ಏಕೆ ಹಾರಬೇಕು?' ಗಂಡಸರಿಗೆ ಅಧಿಕಾರ ಕಳೆದುಕೊಂಡಂತೆ ಅನ್ನಿಸಿ ಕೋಪ ನೆತ್ತಿಗೇರಿತು. ಈ ಹೆಂಗಸರೇಕೆ ಇಂತಹ ಕೆಲಸಗಳಿಗೆ ಕೈ ಹಾಕುತ್ತಾರೆ ಎನ್ನಿಸಿತು. ಅವರಿಗೆ ನಿಜಕ್ಕೂ ಮುಜುಗರ ತಂದದ್ದೆಂದರೆ, ಗಂಡಸರ ಸಹಾಯವಿಲ್ಲದೆಯೇ, ಮಹಿಳೆಯರು ಸೈಕಲ್ ಕಲಿತಿದ್ದು.

ಅವರೇನಾದರೂ ಸೈಕಲ್ ತುಳಿದುಕೊಂಡು ನನ್ನ ಮುಂದೆ ಬರಲಿ, ನಾನು ಮಣ್ಣು ಎಸೆಯುತ್ತೇನೆ.

ಗಂಡಸರು ಬಯ್ದರು, ಕಿಚಾಯಿಸಿದರು. ಸೈಕಲ್‌ಗೆ ಡಿಕ್ಕಿ ಹೊಡೆದು ಬೀಳಿಸುತ್ತೇವೆ ಎಂದರು.

ಮಹಿಳೆಯರು ಇದಾವುದಕ್ಕೂ ಸೊಪ್ಪು ಹಾಕಲಿಲ್ಲ. ಅವರು ಸೈಕಲ್ ತುಳಿಯುವುದು ಬಿಡಲಿಲ್ಲ. ಚಲನೆ, ಸಬಲೀಕರಣ ಮತ್ತು ಸ್ವಾವಲಂಬನೆಯ ಸಂದೇಶವನ್ನು ಹರಡುತ್ತ ಅವರು ಮುನ್ನಡೆದರು.

ರಾತ್ರಿ ತರಗತಿಗಳು

ಗಂಡಸರ ಕೋಪವನ್ನು ಮನಗಂಡು, ಸೈಕಲ್ ಕಲಿಸುವುದನ್ನು ಸ್ವಯಂಸೇವಕರು ರಾತ್ರಿ ಪಾಳಯಲ್ಲಿ ಇಟ್ಟುಕೊಂಡರು. ಕಿಚಾಯಿಸುವವರೂ, ಗೇಲಿ ಮಾಡುವವರೂ ಕಡಿಮೆಯಾಗಿ ರಾತ್ರಿ ಪಾಳಯು ಸುಗಮವಾಗಿ ನಡೆಯಿತು.

ಮಹಿಳೆಯರು ಸೈಕಲ್ ಕಲಿಯಲು ರಾತ್ರಿಯಾಗುವುದನ್ನೇ ಕಾಯತೊಡಗಿದರು. ಆಗ ಗಂಡಸರ ಕಾಟವಿರುತ್ತಿರಲಿಲ್ಲ.

ಕಮಲಿಯೂ ಕೂಡ ಸೈಕಲ್ ಕ್ಯಾಂಪಿಗೆ ದಾಖಲಾದಳು. ಅವಳು ಗುಟ್ಟಾಗಿ ಸೇರಿದ್ದಳು. ಅವಳ ತಂದೆ ತಾಯಿಗಳಿಗೂ ಹೇಳಿರಲಿಲ್ಲ. ಆದರೂ ಅವಳ ತಾಯಿಯು, ಕಮಲಿ ಮೆಲ್ಲನೆ ಹೆಜ್ಜೆ ಇಡುತ್ತಾ ಮನೆಯಿಂದ ಹೊರಹೋಗುವುದನ್ನು ಕಂಡಳು.

ಕಮಲಿಯ ತಾಯಿಗೆ ಗಾಬರಿಯಾಗಿ ಬಿಟ್ಟಿತು. ಕಮಲಿಗೇನೋ ತೊಂದರೆ ಕಾದಿದೆ ಎಂದೇ ಅಂದುಕೊಂಡಳು. ಏನೇನೋ ಭಯಗಳು ಮನಸ್ಸಿನಲ್ಲಿ ಸುಳಿದು ಹೋದವು. ಕಮಲಿಗೆ ಕಾವಲು ಕಾಯಲು ಯಾರಿಗೂ ಹೇಳದೆ ಅವಳ ಹಿಂದೆ ಹೆಜ್ಜೆ ಹಾಕಿದಳು.

ಆದರೆ ಕಮಲಿಯ ತಾಯಿಗೆ ಕಂಡ ದೃಶ್ಯ ಊಹಾತೀತವಾಗಿತ್ತು. ಅವಳ ಮಗಳು, ಕಮಲಿ, ಎಲ್ಲರ ಮುಂದೆ ನಾಚಿಕೆಯ ಮುದ್ದೆಯಾಗಿದ್ದವಳು, ಸೈಕಲ್ ಏರಿ ತಿರುಗಾಡತೊಡಗಿದ್ದಳು. ಅವಳ ಕಣ್ಣುಗಳನ್ನು ನಂಬಲಾಗಲೇ ಇಲ್ಲ. ಕಮಲಿಯ ತಾಯಿಗೆ ಹೃದಯ ತುಂಬಿಬಂದಿತು. ನೇರವಾಗಿ ಮನೆಯ ಕಡೆ ನಡೆದಳು.

ಕಮಲಿಯ ಮನೆಯಲ್ಲಿ ಮಾರನೇ ದಿನ

ಸಹಾಯ ಮಾಡಲು ನಾನಿದ್ದೇನೆ. ಏನು ತೊಂದರೆ ಅಮ್ಮಾ!

ಕಮಲಿ, ನಾನು ಬಹಳ ದಿನದಿಂದ ಮಾತನಾಡಬೇಕೆಂದಿದ್ದೆ. ನೀನು ಮಾತ್ರ ನನಗೆ ಸಹಾಯ ಮಾಡಬಹುದೇನೋ! ನಾನು ಕೆರೆಯ ಬಳಿ ಕಲ್ಲಿನ ಕ್ವಾರಿಯಲ್ಲಿ ಕೆಲಸ ಮಾಡುವುದು ನಿನಗೆ ಗೊತ್ತು. ಅಲ್ಲಿ ಕೆಲಸ ಬಹಳ ಕಷ್ಟ. ಯಾವ ಸವಲತ್ತುಗಳೂ ಇಲ್ಲ. ಅಲ್ಲಿನ ಕಂಟ್ರಾಕ್ಟರ್ ತುಂಬ ಶೋಷಣೆ ಮಾಡುತ್ತಾನೆ. ಕನಿಷ್ಠ ಕೂಲಿಯನ್ನೂ ಕೊಡುವುದಿಲ್ಲ.

ನನಗೆ ಹೇಳು, ಹೇಳಮ್ಮಾ

ಕಳೆದ ವಾರ ಕಂಟ್ರಾಕ್ಟರ್ ನನಗೆ ಗೊತ್ತಿರುವ ಸೆಂಥಿಲ್‌ನನ್ನು ಕರೆದು ಅವನು ಒಂದು ಕಾಗದಕ್ಕೆ ಹೆಬ್ಬೆಟ್ಟು ಹಾಕುವಂತೆ ಬಲವಂತ ಮಾಡಿದ. ಸೆಂಥಿಲ್‌ಗೆ ಓದಲು ಬಾರದು. ಈಗ ಆ ಕಾಗದದಿಂದ ಸೆಂಥಿಲ್ ಜೀತದಾಳು ಆಗಿದ್ದಾನೆಂದು ಹೇಳುತ್ತಾರೆ. ಕಂಟ್ರಾಕ್ಟರ್ ಅವನನ್ನೂ, ಇತರರನ್ನೂ ಗುಲಾಮರಂತೆ ನಡೆಸಿಕೊಳ್ಳತೊಡಗಿದ್ದಾನೆ.

ಅಮ್ಮ ನೀನು ಅವರಿಗೆ ಸಹಾಯ ಮಾಡಬೇಕಾದರೆ ಓದು ಬರಹ ಕಲಿಯಬೇಕು.

ಹೌದು. ಅದು ಸರಿ. ನಾನು ಸೈಕಲ್ ಕೂಡ ಕಲಿಯಬೇಕು. ಎಂದು ಗೊತ್ತು!

ಹ್ಹಾ! ಹೇಗೆ?

ನಾನು ನಿನ್ನೆ ನಿನ್ನ ಹಿಂದೆ ಬಂದೆ. ನೋಡಿ ಖುಷಿಯಾಯಿತು. ನಿನಗೆ ವಿದ್ಯೆ ಹತ್ತಿದೆ.

ಓ ಅಮ್ಮಾ! ನೀನೆಷ್ಟು ಒಳ್ಳೆಯವಳು. ನಿನಗೆ ಕೋಪ ಬರುತ್ತೆಂದು ತಿಳಿದಿದ್ದೆ. ಓದು ಬರಹ ಕಲಿಯುವುದೆಂದರೆ ಮೋಡಿ ಮಾಡಿದಂತೆ. ತರಗತಿಗೆ ನೀನೂ ಬಾ. ನಾನೇ ನಾಳೆ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ.

ಹೀಗೆ ಕಮಲಿಯ ಅಮ್ಮನೂ ಸಹ ಸಾಕ್ಷರರ ಸೈನ್ಯ ಸೇರಿದಳು.

ಕಲೆಕ್ಟರ್ ಶೀಲಾ ರಾಣಿಗೆ ಕ್ವಾರಿಯ ಕಾರ್ಮಿಕರ ಪರಿಸ್ಥಿತಿ ಅತ್ಯಂತ ಕರುಣಾಜನಕವಾಗಿದೆಯೆಂಬುದು ತಿಳಿದಿತ್ತು. ಕಂಟ್ರಾಕ್ಟರುಗಳು ಮಾಡುತ್ತಿರುವ ಘೋರ ಶೋಷಣೆಯ ಬಗ್ಗೆ ಕೇಳಿದ್ದಳು. ಅವರು ಮಹಿಳೆಯರೇ ಒಂದು ಸಹಕಾರ ಸಂಘ ಸ್ಥಾಪಿಸಿಕೊಂಡು, ಕ್ವಾರಿಯನ್ನು ಲೀಸ್‌ಗೆ ಪಡೆದು, ಕಲ್ಲು ತೆಗೆಯುವ ವ್ಯಾಪಾರ ಮಾಡಬಾರದೇಕೆ ಎಂದು ಯೋಚಿಸಿದರು. ಆಗ ಕಂಟ್ರಾಕ್ಟರ್ ನರಕಕ್ಕೆ ಹೋದರೆ ಹೋಗಲಿ ಎಂದುಕೊಂಡಳು.

ಮಹಿಳೆಯರು ಬಹಳ ದುಃಸ್ಥಿತಿಯಲ್ಲಿದ್ದಾರೆ. ಅವರಿಗೆ ಹೊರಗಿನ ಸಹಾಯ ಬೇಕು.

ಕ್ವಾರಿಯಲ್ಲಿನ ಕಾರ್ಮಿಕರು ಪೂರ್ವಕಾಲದ ಪದ್ಧತಿಯಲ್ಲಿ ಕೆಲಸ ಮಾಡುತ್ತಿದ್ದರು. ಬಸಿಲಿನಲ್ಲಿ ಕುಳಿತು ಕಲ್ಲು ಒಡೆಯುವ ಕೆಲಸದಲ್ಲಿ ಬೆನ್ನು ಮುರಿಯುತ್ತಿದ್ದರು. ಅವರಿಗೆ ಸರಿಯಾಗಿ ಕೂಲಿ ಕೊಡುತ್ತಿರಲಿಲ್ಲ. ಹೆಂಗಸರಿಗೆ ಯಾವಾಗಲೂ ಕಡಿಮೆ ಕೂಲಿಯೇ, ಕೆಲಸ ಮಾತ್ರ ಗಂಡಸಿನಷ್ಟೆ.

ಕಂಟ್ರಾಕ್ಟರನಿಗೆ ರಾಜಕೀಯ ಬೆಂಬಲವಿತ್ತು. ಅವನೆದುರು ಯಾರೂ ಉಸಿರೆತ್ತುವ ಹಾಗಿರಲಿಲ್ಲ....

ಆದರೆ ಕಲೆಕ್ಟರರು ಆಜ್ಞೆ ಮಾಡಿದ ಮೇಲೆ ಮಹಿಳೆಯರು ಕುಣಿದಾಡಿದರು.

ನಾವು ಬೇಗ ಓದು ಬರಹ ಕಲಿಯ ಬೇಕು!

ಕಲೆಕ್ಟರರ ಆರ್ಡರ್ ನೋಡಿ.

ಸಹಕಾರ ಸಂಘವನ್ನು ಸ್ಥಾಪಿಸಲು ಕೆಲವು ಅಧಿಕಾರಿಗಳು, ಸ್ವಯಂ ಸೇವಕರೂ, ಮಹಿಳೆಯರಿಗೆ ಸಹಾಯ ಮಾಡಿದರು. ಅರ್ಜಿಗಳನ್ನು ತುಂಬಿದರು.

ಮೊದಲ ಸಂಘವನ್ನು ಕಮಲಿಯು ಒಗ್ಗೂಡಿಸಿದಳು. ಪುದುಕೊಟ್ಟೈನಲ್ಲಿ ಒಂದಿಷ್ಟು ಭೂಮಿಯನ್ನು ಕ್ವಾರಿ ಮಾಡಲು ಗುತ್ತಿಗೆ ಪಡೆದಳು...

ಅವರು ಪ್ರಸಿದ್ಧರಾದರು. ಅವರು ಭಾಗವಹಿಸುತ್ತಿದ್ದ ರಾತ್ರಿ ಶಾಲೆಗಳಲ್ಲಿ ಒಮ್ಮತದಿಂದ ಕೆಲಸ ಮಾಡುತ್ತಿದ್ದರು. ಅವರಿಗೆ ಇದು ಕನಸು ನನಸಾದಂತೆ ಆಗಿತ್ತು. ಕಂಟ್ರಾಕ್ಟರಿನ ಕಪಿಮುಷ್ಟಿಯಿಂದ ಅವರು ಬಿಡಿಸಿಕೊಂಡಿದ್ದರು. ಕೂಲಿಗಾಗಿ ಕೆಲಸ ಹುಡುಕಿಕೊಂಡು ಹೋಗುವ ಬದಲು, ಅವರೇ ಕೆಲಸ ಕೊಡುವ ಮಟ್ಟಕ್ಕೆ ಬಂದರು. ಓದಲು ಈಗಲೂ ಅವರಿಗೆ ಕಷ್ಟವಾಗುತ್ತಿತ್ತು. ಆದರೆ ಸೈಕಲ್ ಏರಿ ಹೋಗುವುದು ಮಜವಾದ ಕೆಲಸವಾಗಿತ್ತು!

ಕೊಲ್ಲಿ ದೇಶಗಳಿಂದ ಗಂಡಂದಿರು ಬರೆದ ಪತ್ರಗಳನ್ನು ಓದಲು ಅನೇಕ ಮುಸಲ್ಮಾನ ಹೆಂಗಸರಿಗೆ ಸಾಧ್ಯವಾಗುತ್ತಿರಲಿಲ್ಲ. ಅವರೆಲ್ಲರೂ ಕೊರಾನ್ ಓದಬಹುದೆಂದು ಪುಸಲಾಯಿಸಿ, ಈ ಹೆಂಗಸರನ್ನು ರಾತ್ರಿ ತರಗತಿಗಳಿಗೆ ಸೇರಿಸಲಾಯಿತು. ಸಾಕ್ಷರತೆಯ ಕರೆ ಮುಟ್ಟಿಸಲು, ಬೀದಿ ನಾಟಕಗಳು ಬಾಣದಂತೆ ನಾಟಿದವು. ಸಣ್ಣ ನಾಟಕಗಳನ್ನು, ಹಾಡುಗಳನ್ನು ಸಾಕ್ಷರತೆಯ ಸಂದೇಶವನ್ನು ಮುಟ್ಟಿಸಲು ವ್ಯಾಪಕವಾಗಿ ಬಳಸಲಾಯಿತು.
ರಾಜು ಇದೇನು ಹೇಳುತ್ತದೆ ನಿನಗೆ ಗೊತ್ತಾಗುತ್ತದೆಯೇ?
ಇಲ್ಲ. ನಂಗೆ ಗೊತ್ತಿಲ್ಲ. ಕಂಟ್ರಾಕ್ಟರ್ ಸಹಿ ಮಾಡಲು ಹೇಳಿದ. ಅದೇನೋ ಬಹಳ ಮುಖ್ಯ ವಾದದ್ದೇ ಇರಬೇಕು.
ನಿನಗೆ ಓದಲು ಬಂದಿದ್ದರೆ, ಇದು ನಿನ್ನನ್ನು ಜೀವನಪರ್ಯಂತ ಜೀತಗಾರನನ್ನಾಗಿ ಮಾಡುತ್ತದೆಂದು ತಿಳಿಯುತ್ತಿತ್ತು. ಆಗ ನೀನು ಅವನಿಗೆ ಗುಲಾಮನಾಗುತ್ತಿದ್ದೆ.
ಜೀವನದ ಒಳತಿಗಾಗಿ ಬರೆಯಿರಿ, ಓದಿರಿ!
ಸುತ್ತಮುತ್ತಲಿನ ಜನರ ಕಷ್ಟಗಳಿಗೆ ಸ್ಪಂದಿಸುವ ಹಾಗಿದ್ದುದರಿಂದ ಈ ಸಣ್ಣ ನಾಟಕಗಳು ಬಹಳ ಪರಿಣಾಮಕಾರಿಯಾಗಿದ್ದವು.
ನೆರೆದ ಜನರನ್ನು ಮಾತಿಗೆ ಹಚ್ಚಿ, ಅವರೊಳಗಿನ ಆಲೋಚನೆಗಳನ್ನು ಹೊರಸೆಳೆಯಲು ಇದು ಅಸ್ತ್ರವಾಯಿತು.
ಓದು, ಬರೆಯಲು ನಾವೇಕೆ ಕಲಿಯಬೇಕು. ನಮಗೇಕೆ ಅವೆಲ್ಲ. ಮಾಡಲು ನೂರಾರು ಕೆಲಸಗಳಿರುವಾಗ ಈ ಹುಚ್ಚು ನಮಗೇಕೆ? ನಾವೇನು ಸರ್ಕಾರಿ ಕೆಲಸ ಮಾಡಬೇಕೆ? ಈ ಶಿಕ್ಷಣದ ಗೋಳು ನಮಗೇಕೆ?
ಕೆಲಸಕ್ಕೆ ಸೇರುವುದೊಂದೇ ಶಿಕ್ಷಣದ ಗುರಿಯಲ್ಲ. ಅಥವಾ ಹಣ ಮಾಡುವುದೇ ಗುರಿಯಲ್ಲ. ಅದು ಜೀವನವನ್ನು ಆನಂದಗೊಳಿಸಲು ಒಂದು ಸಾಧನವಷ್ಟೆ. ನಿಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಶಿಕ್ಷಣವು ಸಹಾಯ ಮಾಡುತ್ತದೆ. ಚೆನ್ನಾಗಿ ವಿಶ್ಲೇಷಣೆ ಮಾಡಿ, ತಪ್ಪು, ಒಪ್ಪುಗಳನ್ನು ಸರಿಪಡಿಸಿಕೊಳ್ಳಲು ಪ್ರೇರಿಸುತ್ತದೆ. ನಿಮ್ಮ ಜೀವನಕ್ಕೆ ಒಳ್ಳೆಯದಾಗುತ್ತದೆ. ಓದು ಬರಹಗಳು ಹೊಸ ಪ್ರಪಂಚವನ್ನೇ ತೆರೆದಿಡುತ್ತವೆ. ಕಾಯಿದೆ, ಕಾನೂನುಗಳು ನಿಮಗೆ ತಿಳಿದುಬಂದರೆ, ಶೋಷಣೆಯಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ.
ಕಲಿಕೆಯು ಮುಕ್ತಿಗೆ ದಾರಿಯಾಗುತ್ತದೆ.

ನಮಗೆ ಕೊಳ್ಳಲು ಸಾಧ್ಯವಿಲ್ಲ, ಆದರೆ



ಪುದುಕೊಟ್ಟೈನಲ್ಲಿ ಅನೇಕ ಮಹಿಳೆಯರಿಗೆ ಸೈಕಲ್ ಕೊಳ್ಳಲು ಸಾಧ್ಯವೇ ಇರಲಿಲ್ಲ. ಅದಕ್ಕಾಗಿ ಆರ್. ಮಂಜುನಾಥನ ಬೈಸಿಕಲ್ ಅಂಗಡಿಯು, ಸೈಕಲ್‌ಗಳನ್ನು ಗಂಟೆಯ ಲೆಕ್ಕದಲ್ಲಿ ಬಾಡಿಗೆಗೆ ಕೊಡಲು ಶುರು ಮಾಡಿತು. ಹೆಂಗಸರಿಗಾಗಿ ಇರುವ ಬಾಗಿದ ಫ್ರೇಮ್‌ನ ಬೈಸಿಕಲ್‌ಗಳು ಬಹಳ ಸಂಖ್ಯೆಯಲ್ಲಿ ಇರಲಿಲ್ಲ. ಆದರೂ ಮಹಿಳೆಯರಿಗೆ ಇದು ಕಷ್ಟವೆನಿಸಲಿಲ್ಲ. ಅವರು ಗಂಡಸರ ಸೈಕಲ್‌ಗಳನ್ನೇ ಉಪಯೋಗಿಸ ತೊಡಗಿದರು. ಮತ್ತೆ ಬಾಡಿಗೆಗೆ ಹಣ ಮಹಿಳೆಯರು ಹೇಗೋ ಹೊಂದಾಣಿಕೆ ಮಾಡಿಕೊಂಡರು. ಅವರು ಬಾಡಿಗೆಯನ್ನು ಇಬ್ಬರು, ಮೂವರು ಹಂಚಿಕೊಂಡರು. ಡಬಲ್ ರೈಡಿಂಗ್ ಮಾಡಿಕೊಂಡರು. ಬಾಡಿಗೆಯನ್ನು ಸಾಲವಾಗಿ ಪಡೆದರು.

ಶೀಲಾ ರಾಣಿಯವರು ತಮ್ಮ ಕೈಲಾದದ್ದನ್ನೆಲ್ಲಾ ಮಾಡಿದರು. ಅವರು ತಮ್ಮ ಸ್ಥಾನ ಬಲದಿಂದ ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಧಾರ್ಮಿಕ ಸಂಸ್ಥೆಗಳು ಮತ್ತು ಇತರೆ ದಾನಿ ಸಂಸ್ಥೆಗಳನ್ನು ಸಂಪರ್ಕಿಸಿ ಸೈಕಲ್‌ಗಳನ್ನು ದಾನ ಮಾಡುವಂತೆ ಮಾಡಿದರು. ಬೈಸಿಕಲ್ ಕೊಳ್ಳಲು ಮಹಿಳೆಯರಿಗೆ ಸಾಲ ನೀಡುವಂತೆ ಬ್ಯಾಂಕ್‌ಗಳಿಗೆ ಆರ್ಡರ್ ಮಾಡಿದರು. ಪುದುಕೊಟ್ಟೈನಲ್ಲಿ ಬೈಸಿಕಲ್‌ಗಳು ಸದಾ ಮಾರಾಟಕ್ಕೆ ಸಿಗುವಂತೆ ಸೈಕಲ್ ತಯಾರಕರನ್ನು ಕೇಳಿಕೊಂಡರು.

ಈ ಎಲ್ಲಾ ಉತ್ಸಾಹಭರಿತ ಸಂಗತಿಗಳು ನಡೆಯುತ್ತಿದ್ದಾಗ ಒಬ್ಬಳೇ ಕೈಬಿಟ್ಟು ಹೋದ ಹಾಗಿದ್ದಿತು. ಒಂದು ದಿನ ಮಧ್ಯಾಹ್ನ ಕಮಲಿ ತನ್ನ ಕಣ್ಣನ್ನೇ . ನಂಬದಾದಳು. ಅವಳೆದುರು ಅಮೀನ ಮಾರ್ಕೆಟ್‌ನಲ್ಲಿ ನಿಂತಿದ್ದಳು.

ನಿನ್ನನ್ನು ಕಂಡು ಕುಣಿಯುವ ಹಾಗಾಗಿದೆ. ಬಾ, ಮೊದಲು ಮನೆಗೆ ಹೋಗೋಣ. ತಿನ್ನುವುದಕ್ಕೆ ಏನಾದರೂ ಕೊಡುತ್ತೇನೆ. ದೇವರೇ, ನಾವು ನಿನ್ನ ಬಗ್ಗೆ ಎಷ್ಟು ಯೋಚನೆ ಮಾಡಿದೆವು ಗೊತ್ತಾ!

ಆಗಲೇ, ರವಿಯು ತನ್ನ ತಂದೆಯನ್ನು, ಮಂಜುನಾಥನ ಸೈಕಲ್ ಶಾಪಿನಲ್ಲಿ ಕಂಡನು. ಅಂಗಡಿಯವನೊಡನೆ ಏನೋ ದೀರ್ಘವಾಗಿ ಮಾತನಾಡುತ್ತಿದ್ದನು.

ಸ್ವಲ್ಪ ಸಮಯದ ಬಳಿಕ ಎಲ್ಲರೂ ಮನೆಯ ಹತ್ತಿರ ಒಟ್ಟಿಗೆ ಬಂದರು.
"ಅಮ್ಮ"
ಅಮ್ಮಾ! ಇಲ್ಲಿ ನೋಡು ಅಮ್ಮಾ !!
ಸೈಕಲ್ ಬಂದಿದೆ! ಅಮೀನಾ ಬಂದಿದ್ದಾಳೆ! ಎರಡೂ ಒಟ್ಟಿಗೆ ಆಗಿಬಿಟ್ಟಿದೆ. ಸಂತೋಷವನ್ನು ತಡೆಯಲಾಗುತ್ತಿಲ್ಲ.
ಅಳಗಮ್ಮಾ ಇಲ್ಲಿ ನೋಡು!
ಹೋ ಸೈಕಲ್
ಚೆನ್ನಾಗಿದೆಯಾ. ನಿನಗೆ ಬೇಕಾದ ಸೈಕಲ್ ಮಾಡೆಲ್ ಇದೇನಾ?
ನನಗಿದು ಬಹಳ ಚೆನ್ನಾಗಿದೆ. ಅದಿರಲಿ ಹಣವನ್ನು ಹೇಗೆ ಹೊಂದಿಸಿದೆ.
ಮಂಜುನಾಥನು ನನ್ನ ಹಳೆಯ ಸ್ನೇಹಿತ. ಅವನು ಬಹಳ ಒಳ್ಳೆಯವನು. ತಿಂಗಳಿಗಷ್ಟು ಎಂದು ಅವನಿಗೆ ಕೊಡಬಹುದು.
ನನ್ನ ಬಾಯಲ್ಲಿ ಮಾತೇ ಹೊರಡುತ್ತಿಲ್ಲ. ತುಂಬಾ ಥ್ಯಾಂಕ್ಸ್.

ಕಮಲಿಯ ತಾಯಿ, ಸೈಕಲ್ ನೋಡಿ ಸಂತೋಷದಿಂದ ಹಿಗ್ಗುತ್ತಿರುವಾಗ ಅಮೀನಾ ಮತ್ತು ಕಮಲಿ ಮಾತನಾಡತೊಡಗಿದರು.

ಕಮಲಿ. ನನ್ನ ಗಂಡನೊಡನೆ ಜೀವನ ಮಾಡುವುದು ಭಯಂಕರವಾಗಿತ್ತು. ಅವನಿಗೆ ಗಂಡು ಮಗುವೊಂದು ಬೇಕಾಗಿತ್ತು. ನಾವು ಅಲ್ಟ್ರಾಸೌಂಡ್ ರಿಪೋರ್ಟ್ ತೆಗೆದುಕೊಂಡ ದಿನ. ಅವನು ಹುಚ್ಚನಾಗಿದ್ದ. ಮಾತನಾಡಲೇ ಇಲ್ಲ. ನನಗೇನು ಬೇಕೆಂದೂ ಕೇಳಲಿಲ್ಲ. ಗರ್ಭ ತೆಗೆಸಲು ನನ್ನನ್ನು ಆಸ್ಪತ್ರೆಗೆ ಎಳೆದುಕೊಂಡು ಹೋದ.

ಅಯ್ಯೋ ದೇವರೆ

ಅಯ್ಯೋ ದೇವರೇ. ಕಮಲಿ. ನನಗಾದದ್ದು ನೆನಸಿಕೊಂಡರೆ ಈಗಲೂ ಭಯವಾಗುತ್ತದೆ. ನನ್ನ ಹೆಣ್ಣುಮಗುವನ್ನು ನೆನಸಿಕೊಂಡರೆ ಹೊಟ್ಟೆ ಕಿವಿಚಿದಂತಾಗುತ್ತದೆ. ಮಗುವಿನ ಯಾವ ತಪ್ಪೂ ಇಲ್ಲದೆ ಕೊಲೆ ಮಾಡಿದಂತಾಗಿದೆ. ನಾನು ಈಗೇನು ಮಾಡಲಿ. ನನಗೆ ಯಾರ ಬೆಂಬಲವೂ ಇಲ್ಲ. ದೆವ್ವದ ತರಹ ಹಳ್ಳಿಯಲ್ಲಿ ಓಡಾಡಿಕೊಂಡಿದ್ದೇನೆ. ನಿನ್ನನ್ನು ನೋಡುವವರೆಗೂ ಮೂಕಳಾಗಿದ್ದೆ. ಹಳೆಯದೆಲ್ಲ ಈಗ ಒತ್ತರಿಸಿಕೊಂಡು ಬರುತ್ತಿದೆ. ಕಮಲೀ. ನಾನು ಏನು ಮಾಡಲಿ ಹೇಳು.

ಶ್ಶ್. ಸುಮ್ಮನಿರು. ಅಳಬೇಡ. ನಮ್ಮ ಮನೆಯಲ್ಲಿ ನಿನಗಾವ ತೊಂದರೆಯೂ ಇಲ್ಲ. ನಿನಗೇನೂ ಆಗದಂತೆ ನಾನು ನೋಡಿ ಕೊಳ್ಳುತ್ತೇನೆ. ನಾನೊಂದು ಕಡೆ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ. ನಿನಗೆ ಅದನ್ನು ನೋಡಿ ಉತ್ಸಾಹ ಬರುತ್ತದೆ.

ಅಮೀನಾಳು, ಶಾಲೆಯಲ್ಲಿ ಚೆನ್ನಾಗಿ ಓದುತ್ತಿದ್ದಳು. ಅವಳ ಅಪ್ಪ ಶಾಲೆ ಬಿಡಿಸಿಬಿಟ್ಟ. ಮತ್ತೆ ಕಲಿಯಬೇಕೆಂಬ ಮಹದಾಸೆ ಉಂಟಾಯಿತು ಅಮೀನಾಳಗೆ.

ನಮ್ಮ ಜಿಲ್ಲೆಯಲ್ಲಿ, ರಾಷ್ಟ್ರೀಯ ಸಾಕ್ಷರತಾ ಅಭಿಯಾನವು ಪಾಠದ ತರಗತಿಗಳನ್ನೂ, ಸೈಕಲ್ ಕಲಿಸುವುದನ್ನೂ ಒಟ್ಟಿಗೇ ಮಾಡುತ್ತಿದೆ. ಇದು ಮಹಿಳೆಯರಿಗಾಗಿ. ಅದನ್ನು ಅವರು ಪೂರ್ಣ ಸಾಕ್ಷರತಾ ಅಭಿಯಾನವೆಂದು ಕರೆಯುತ್ತಾರೆ. ನಾನು ಈ ತರಗತಿಗೆ ಸೇರಿದ್ದೇನೆ. ಇದು ಬಹಳ ಚೆನ್ನಾಗಿದೆ. ನಾನು ಮತ್ತೆ ಶಾಲೆಗೆ ಸೇರಿದ ಹಾಗಾಗಿದೆ. ಹೊಸತನ್ನು ಕಲಿಯುತ್ತಿದ್ದೇನೆ.

ನಮ್ಮ ಹಳ್ಳಿಯಲ್ಲಿ ಇಂತಹುದು ಹಿಂದೆಂದೂ ಆಗಿಯೇ ಇಲ್ಲ. ನಾನೂ ಈ ತರಗತಿಗಳನ್ನು ನೋಡಬೇಕು. ನನಗೆ ಓದು, ಬರಹ ಮೊದಲೇ ಗೊತ್ತಿದೆ. ನಾನೂ ಇದಕ್ಕೆ ಸಹಾಯ ಮಾಡಬಲ್ಲೆ.

ವಾವ್

ಸಕೀನಾ, ಒಳ್ಳೇ ಕೆಲಸ ಮಾಡ್ತಾ ಇದ್ದೀಯಾ!

ಟ್ರಿಂಗ್ ಟ್ರಿಂಗ್

ಅದೇ ವಾರ ಅಮೀನಾಳು ತರಗತಿ ಸೇರಿದಳು. ಅವಳು ಪಾಠವನ್ನೂ ಕಲಿತು, ಅದನ್ನೂ ಇತರರಿಗೆ ಹೇಳಕೊಡುತ್ತಿದ್ದಳು. ಅವಳಿಗೆ ತನ್ನ ಸಂಕಟವೆಲ್ಲಾ ಮರೆತುಹೋಯಿತು.

ರಾ
'ರಾ' ಬರೆಯುವುದು ಹೀಗೆ. 'ರಾ' ದಿಂದ ಶುರುವಾಗುವ ಪದವನ್ನು ಯಾರು ಹೇಳುತ್ತೀರಿ. ಸಿಂಧು ನೀನು.....
ಅಮೀನಾಳು ಎಷ್ಟು ಚೆನ್ನಾಗಿ ತಿಳಿದುಕೊಂಡಿದ್ದಳೆಂದರೆ ಅವಳನ್ನು ಕೆಲವು ದಿನಗಳಲ್ಲೇ, ತರಗತಿಯ ಟೀಚರ್ ಆಗಿ ನೇಮಿಸಿಬಿಟ್ಟರು. ಅವಳು ದಯಾಮಯಿ, ಬುದ್ಧಿವಂತಳು. ಬಹಳ ಬೇಗ ಅವಳ ಪ್ರಸಿದ್ಧಿ ಹರಡಿತು.

ನಿಧಾನವಾಗಿ ಅಮೀನಾಳಿಗೆ ಶಕ್ತಿ ಬಂದಿತು. ಒಮ್ಮೆ ಹಳ್ಳಿಯ ರಸ್ತೆಯಲ್ಲಿ ಬೀದಿ ನಾಟಕ ತಂಡವನ್ನು ಕಂಡಳು. ಅವರೊಂದಿಗೆ ಬಹಳ ಹೊತ್ತು ಮಾತನಾಡಿದಳು. ಇದಾದ ಬಳಿಕ ತನ್ನ ಕಥೆಯನ್ನು ಎಲ್ಲರಿಗೂ ಹೇಳಲು ಅವಳಿಗೆ ಧೈರ್ಯ ಬಂದಿತು.
ಈ ಕಥೆಯನ್ನು ಎಲ್ಲರಿಗೂ ಹೇಳುವುದು ಮುಖ್ಯ. ಇದನ್ನು ಹೇಳಲೇಬೇಕು. ಈ ತರಹ ಇನ್ನಾರಿಗೂ ಆಗಬಾರದು.
ನಾವು ನಿನ್ನ ಕಥೆಯನ್ನು ನಾಟಕ ಮಾಡುತ್ತೇವೆ. ಬೀದಿ ನಾಟಕದಲ್ಲಿ ಜನರ ಬಳಿ ಕೊಂಡೊಯ್ಯುತ್ತೇವೆ.

ಅಮೀನಾಳನ ಮೇಲಿನ ದೌರ್ಜನ್ಯವು ಅವಳನ್ನು ಇನ್ನಷ್ಟು ಶಕ್ತಿ ಹೊಂದುವಂತೆ ಮಾಡಿತು. ಸುತ್ತಲಿನ ಜನರ ಸಂಘಟನೆಯು ಅವಳಿಗೆ ಬಲ ತಂದಿತು. ಆಂಗ ತಾರತಮ್ಯದ ವಿರುದ್ಧ ಮಾತನಾಡುವಂತೆ ಮಾಡಿತು. ಮಹಿಳೆಯ ಮೇಲಿನ ದೌರ್ಜನ್ಯದ ವಿರುದ್ಧವೂ ದನಿಯೆತ್ತುವಂತಾಯಿತು. ಅವಳು ಪೂರ್ಣವಾಗಿ ಸಮಾಜಕಾರ್ಯಕರ್ತೆಯಾದಳು.

ಅಮೀನಾ

ಶೀಲಾ ರಾಣಿಯವರು, ಬಡವರ ಪರ ಇರುವ ಸರ್ಕಾರಿ ಆಫೀಸರ್ ಆದರು. ಬಡವರ ಹಾಗೂ ಮಹಿಳೆಯರ ಬಗೆಗಿನ ಅವರ ಕಾಳಜಿಯು ಅವರಿಗೆ ಬಹಳ ಹೊಗಳಿಕೆ ತಂದಿತು. 2008ರಲ್ಲಿ ಅವರಿಗೆ ಪ್ರಧಾನ ಮಂತ್ರಿಗಳ 'ಶ್ರೇಷ್ಠ ಅಧಿಕಾರಿ' ಪ್ರಶಸ್ತಿಯು ದಕ್ಕಿತು.

ಶೀಲಾ ರಾಣಿ

ಮಹಿಳೆಯರಿಗಾಗಿ ಸೈಕಲ್ ರೇಸ್‌ಗಳು ನಡೆದವು. ಬಹುಮಂದಿ ಮಹಿಳೆಯರು ಭಾಗವಹಿಸಿದರು.

ಬೈಕ್ ಬ್ರಿಗೇಡ್
1,00,000 ಮಹಿಳೆಯರು
ಚಕ್ರಗಳ ಮೇಲೆ!

ಜಗತ್ತಿಗೆ ಪುದುಕೊಟ್ಟೈನ ಮಹಿಳೆಯರು ಪಾಠ ಕಲಿಸಿದರು. ತಮ್ಮ ದಾರಿದ್ರ್ಯ, ಹಿಂದುಳಿಕೆ, ಹಿಂಜರಿತಗಳ ನಡುವೆಯೂ, ಅವರು ಮುನ್ನುಗ್ಗುವ ಛಾತಿ ತೋರಿಸಿದರು. ಬಹುಕಾಲದ ಸಂಕೋಲೆಗಳನ್ನು ಕಿತ್ತೆಸೆದರು.

ವನಿತಾ ಚಿಂತನ ಮಾಲೆ

ಕಮಲಾದೇವಿ ಚಟ್ಟೋಪಾಧ್ಯಾಯ

ಚಿಂತನ ಚಾವಡಿ


ಸ್ತ್ರೀಪದ

ದೀಪದಾರಿಣಿ


ಮಹಿಳೆ
ವಿಜ್ಞಾನಿಗಳು


ಭಾರತದ
ಸ್ವಾತಂತ್ರ್ಯ ಸಂಗ್ರಾಮಕ್ಕೆ
ಮುಸ್ಲಿಂ ಮಹಿಳೆಯರ
ಕೊಡುಗೆ

ಧೀಮತಿಯರು

ನೆಲ್ಲಿನ ಎನ್ನನು

ಹೋರಾಟದ ಹಾದಿಯಲ್ಲಿ
ಧೀಮಂತ ಮಹಿಳೆಯರು
WOMEN IN BLACK
MILITARISM
WAR
ನೇಮಿಚಂದ್ರ

ಸಂಗತಿ

ಉಷೋದಯ

ಇಸ್ಲಾಂ ಮತ್ತು ಮಹಿಳೆ

ನೂರಿ


ನೋವು ತುಂಬಿದ ಬದುಕು

ಶಕ್ತಿನಾಮನ
ಸತ್ಯ ಕಥೆಗಳು


ಕೈರುಬೆಲೆಯ
ಕೋಕಿಕಾರ

ಇಳಾ ಭಟ್

ನಿರಕ್ಷರಿಯ
ಆತ್ಮಕಥೆ


ಮಹಿಳೆಯರು

1991ರಲ್ಲಿ ತಮಿಳುನಾಡಿನ ಪುದುಕೊಟ್ಟೈನಲ್ಲಿ ಒಂದು ಅಸಾಧಾರಣ ಮತ್ತು ಅಭೂತಪೂರ್ವ ಪ್ರಯೋಗವೊಂದು ನಡೆಯಿತು. ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ ಫಲವಾಗಿ ಒಂದು ಲಕ್ಷಕ್ಕೂ ಹೆಚ್ಚು ಅನಕ್ಷರಸ್ಥ ಗ್ರಾಮೀಣ ಮಹಿಳೆಯರು ಓದು – ಬರೆಹ ಕಲಿತದ್ದು ಮಾತ್ರವಲ್ಲ ಸೈಕಲ್ ಸವಾರಿಯನ್ನೂ ಕಲಿತರು. ಜಗತ್ತಿನ ಯಾವ ಭಾಗದಲ್ಲೂ ಮಹಿಳೆಯರಿಗೆ ಈ ಪ್ರಮಾಣದಲ್ಲಿ ಸ್ವಾತಂತ್ರ್ಯ ಮತ್ತು ಓಡಾಡುವ ಸಾಮರ್ಥ್ಯ ದೊರಕಿದ್ದೇ ಇಲ್ಲ. ಈ ಸ್ಫೂರ್ತಿದಾಯಕ ಘಟನೆಯನ್ನು ಅತ್ಯಾಕರ್ಷಕ ರೇಖಾಚಿತ್ರಕಥೆಯ ರೂಪದಲ್ಲಿ ಇಲ್ಲಿ ಸೆರೆಹಿಡಿಯಲಾಗಿದೆ. ಮಹಿಳಾ ಸ್ವಾವಲಂಬನೆ ಮತ್ತು ಸಬಲೀಕರಣಕ್ಕೆ ಈ ಕೃತಿ ಒಂದು ಅಪೂರ್ವ ಕೊಡುಗೆ.

✳ ✳ ✳



ಅರವಿಂದ ಗುಪ್ತ

ಅರವಿಂದ ಗುಪ್ತ ಅವರು ಕಾನ್ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆಯಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ (1975). ವಿಜ್ಞಾನ ಚಟುವಟಿಕೆಗಳ ಕುರಿತು 15 ಕೃತಿಗಳನ್ನು ರಚಿಸಿದ್ದಾರೆ. ಹಿಂದಿಯಲ್ಲಿ ಅವರ 140 ಕೃತಿಗಳು ಹೊರಬಂದಿವೆ. ದೂರದರ್ಶನಕ್ಕಾಗಿ ವಿಜ್ಞಾನ ಕುರಿತು 125 ಚಿತ್ರಗಳನ್ನು ನಿರ್ಮಿಸಿದ್ದಾರೆ. ಅವರ ಮೊದಲ ಪುಸ್ತಕ 'ಮ್ಯಾಚ್‌ಸ್ಟಿಕ್ ಮಾಡೆಲ್ಸ್ ಅಂಡ್ ಅದರ್ ಸೈನ್ಸ್ ಎಕ್ಸ್‌ಪೆರಿಮೆಂಟ್ಸ್' ಭಾರತದ 13 ಭಾಷೆಗಳಿಗೆ ಅನುವಾದವಾಗಿದೆ; 5 ಲಕ್ಷ ಪ್ರತಿಗಳು ಮಾರಾಟವಾಗಿವೆ. ಮಕ್ಕಳಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು ಸ್ಥಾಪಿಸಿರುವ ರಾಷ್ಟ್ರೀಯ ಪ್ರಶಸ್ತಿಗೆ ಮೊದಲು ಭಾಜನರಾದವರು ಇವರು (1988). ಐ.ಐ.ಟಿ. ಕಾನ್ಪುರದ ಹಳೆಯ ವಿದ್ಯಾರ್ಥಿಗಳ ವಿಶೇಷ ಪ್ರಶಸ್ತಿ (2000), ಇಂದಿರಾಗಾಂಧಿ ಜನಪ್ರಿಯ ವಿಜ್ಞಾನ ಪ್ರಶಸ್ತಿ (2008), ಮಕ್ಕಳಲ್ಲಿ ವಿಜ್ಞಾನಾಸಕ್ತಿ ಮೂಡಿಸಲು ಸ್ಥಾಪಿಸಿದ 'ಥರ್ಡ್ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸ್ ಪ್ರಶಸ್ತಿ' (2010), ಪ್ರೊ॥ ಸಿ.ಎನ್.ಆರ್. ರಾವ್ ಶ್ರೇಷ್ಠ ವಿಜ್ಞಾನ ಶಿಕ್ಷಕ ಪ್ರಶಸ್ತಿ (2011) ಇವರಿಗೆ ಬಂದಿರುವ ಪ್ರಶಸ್ತಿಗಳಲ್ಲಿ ಕೆಲವು. ಇವರ ವೆಬ್‌ಸೈಟ್ http//arvindguptatoys.com ನಲ್ಲಿ ಅಸಂಖ್ಯ ಪುಸ್ತಕಗಳೂ, ಆಟಿಕೆಗಳೂ ಲಭ್ಯವಿವೆ.



ವಿ. ಎಸ್. ಎಸ್. ಶಾಸ್ತ್ರಿ

ವಿ. ಎಸ್. ಎಸ್. ಶಾಸ್ತ್ರಿ ಅವರು ಗಣಿತದ ಕುಶಲ ಕರ್ಮಿಗಳು. ಒರಿಗಾಮಿ–ಗಣಿತದ ಸಂಬಂಧದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ ಕೆಲವೇ ಕೆಲವರಲ್ಲಿ ಇವರೂ ಒಬ್ಬರು. ನವಕರ್ನಾಟಕ 'ಗಣಿತ ಸಂವತ್ಸರ ಮಾಲೆ' ಸಂಪಾದಕರಲ್ಲೊಬ್ಬರು. ಗಣಿತ ಮತ್ತು ವಿಜ್ಞಾನ ಕುರಿತು ಹಲವು ಕೃತಿಗಳನ್ನು ರಚಿಸಿದ್ದಾರೆ. ಶ್ರೀ ಗುಪ್ತರವರ ಹಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 2011ರಲ್ಲಿ ಕರ್ನಾಟಕ ವಿಷನ್ ಗ್ರೂಪ್‌ನಿಂದ ವಿಜ್ಞಾನ ಸಂವಹನಕಾರ ಪ್ರಶಸ್ತಿ ಲಭಿಸಿದೆ.

ಇಷಿತಾ ಧರಪ್ ಅವರು ಕಲಾವಿದರು ಮತ್ತು ವಿನ್ಯಾಸಕಾರರು. ಅವರು ಸೃಷ್ಟಿ ಸ್ಕೂಲ್ ಆಫ್ ಆರ್ಟ್ ಮತ್ತು ಡಿಸೈನ್‌ನಲ್ಲಿ ಕಲೆಯ ವಿಭಾಗದಲ್ಲಿ ಡಿಪ್ಲೊಮಾ ಮಾಡಿದರು (2012). ಆಗಿನಿಂದ ಪುಸ್ತಕಗಳಿಗೆ ಚಿತ್ರ ಬರೆಯುವುದನ್ನೂ, ವಿನ್ಯಾಸ ಮಾಡುವುದನ್ನೂ ಹವ್ಯಾಸವಾಗಿಸಿಕೊಂಡಿದ್ದಾರೆ. ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದಾರೆ. ಅವರು ಶಿಕ್ಷಣ, ನಾಟಕ ಕಲೆಯನ್ನು ಶಾಲೆಯೊಳಗೆ ತರುವ ಬಗೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಕಲಾಕೃತಿಗಳನ್ನು cargocollective.com/ishitadharapನಲ್ಲಿ ನೋಡಬಹುದು.

ISBN 81-8467-714-6
9 788184 677140

Code 002992 ₹ 60

Shop Online www.navakarnataka.com
http://navakarnataka.blogspot.in facebook.com/navakarnataka